ಆರಂಭವಾಗಲಿ ರಾಜ್ಯದಲ್ಲಿ ಬರದ ಪರಿಸ್ಥಿತಿ ಏನು ಇದೆ ಅದರ ಬಗ್ಗೆ ಚರ್ಚೆಯಾಗಲಿ, ಸರ್ಕಾರ ಅದಕ್ಕೆ ಉತ್ತರ ಕೊಡುತ್ತದೆ

9 ನಿಯಮ 69ರ ಮೇರೆಗೆ ಚರ್ಚೆ

ವಿಷಯ ರಾಜ್ಯದ 128 ತಾಲ್ಲೂಕುಗಳಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಬಗ್ಗೆ

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಎಂ ಪಿ ಪ್ರಕಾಶ್ ರವರು ಬಹಳಷ್ಟು ಕಾನೂನಿನ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ ಈಗಾಗಲೇ ನಮ್ಮ ಸ್ನೇಹಿತರು ಹೇಳಿದ ಹಾಗೆ ಬರಗಾಲದ ಭೀಕರವಾದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಹೇಗೆ ಇದೆ ಎಂದು ಹೇಳಿದ್ದಾರೆ ವಿಶೇಷವಾಗಿ ಹಳ್ಳಿಗಳಲ್ಲಿ ಇದು ಪ್ರಾರಂಭವಾಗಿದೆ ಇದರ ಬಗ್ಗೆ ಸರ್ಕಾರ ಏನೂ ಕ್ರಮ ತೆಗೆದುಕೊಂಡಿಲ್ಲವೆನ್ನುವುದು ನಮ್ಮ ಆರೋಪ ತಾವು ಇದನ್ನು ಕೊನೆಯದಾಗಿ ರೂಲ್ 69ಕ್ಕೆ ಕನ್‌ವರ್ಟ್ ಮಾಡಿ ಚರ್ಚೆಗೆ ತೆಗೆದುಕೊಳ್ಳಬೇಕೆಂದು ಈಗಾಗಲೇ ತಮ್ಮ ತೀರ್ಮಾನ ನೀಡಿದ್ದೀರಿ ರಾಜ್ಯಪಾಲರ ಭಾಷಣದಲ್ಲೂ ಕೂಡ ಇದರ ಬಗ್ಗೆ ಚರ್ಚೆಗೆ ಅವಕಾಶ ಇದೆ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ ಈಗಾಗಲೇ ನಮ್ಮ ಸ್ನೇಹಿತರು ಹೇಳಿದಾಗೆ, ಈ ಒಂದು ಆರು ತಿಂಗಳ ಅವಧಿಯಲ್ಲಿ ಬೆಳಗಾವಿಯ ಅಧಿವೇಶನ ಆದ ನಂತರ ಬಹಳಷ್ಟು ವಿಷಯಗಳು ನಮಗೆ ಬಂದಿವೆ ಬಹಳಷ್ಟು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡತಕ್ಕಂಥ ಅವಕಾಶವೂ ಕೂಡ ನಮಗೆ ಇದೆ ಸಾಲ ಮನ್ನಾ ಮಾಡುವ ಬಗ್ಗೆ, ಇವತ್ತು ಗುಲ್ಬರ್ಗಾದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳ ಹೇಳಿಕೆ, ಮತ್ತು ನಂತರದಲ್ಲಿ ಮಾನ್ಯ ಕುಮಾರಸ್ವಾಮಿಯವರ ಹೇಳಿಕೆ, ಇದು ದೊಡ್ಡ ಕಾಂಪಿಟೇಶನ್ ಆಗಿಬಿಟ್ಟಿದೆ ಕೊನೆಯದಾಗಿ ಸಮ್ಮಿಶ್ರ ಸರ್ಕಾರದಲ್ಲಿ ಎಲ್ಲಿಯವರೆಗೆ ಈ ಒಂದು Common Minimum Programme ಇದೆ ಒಟ್ಟಾರೆ ಕೆಲಸ ಮಾಡತಕ್ಕಂಥ ದಾಟಿ ಬೇರೆ ಇದೆ ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಇವತ್ತು ನಮ್ಮ ಅಧಿಕಾರಕ್ಕೆ ಯಾರೂ ಕೂಡ ಪ್ರಶ್ನೆ ಹಾಕತಕ್ಕಂಥದ್ದಿಲ್ಲವೆಂದು ಹೇಳಿದರು ಪ್ರಜಾಪ್ರಭುತ್ವದಲ್ಲಿ ರಾಜ್ಯದ ಅಭಿವೃದ್ಧಿ ಕೆಲಸ ಕಾರ್ಯಗಳು ಆಗಬೇಕಾದರೆ ಕೊನೆಯದಾಗಿ ಸಂಪುಟದಲ್ಲಿ ಅದರ ಬಗ್ಗೆ ನಿರ್ಣಯವಾಗಬೇಕಾಗುತ್ತದೆ ಇದರ ಬಗ್ಗೆ ಸಾಕಷ್ಟು ವ್ಯತ್ಯಾಸಗಳಿವೆ ಮತ್ತು ರಾಜಕೀಯವಾಗಿ ವ್ಯತ್ಯಾಸವಾಗಿವೆ ಜೊತೆಗೆ ಆ ಒಂದು ಪಕ್ಷದ ರಾಷ್ಟ್ರಾಧ್ಯಕ್ಷರು ಕೂಡ ಪ್ರತ್ಯೇಕವಾದಂಥ ಹೇಳಿಕೆಯನ್ನು ಕೊಡುತ್ತಿದ್ದಾರೆ ಇವೆಲ್ಲವನ್ನು

ನೋಡಿದರೆ, ನಮಗೆ ಈ ಸರ್ಕಾರ ಎಲ್ಲಿಯವರೆಗೆ ನಡೆಯುತ್ತದೆ ಎನ್ನತಕ್ಕಂಥ ಅನುಮಾನ ನಮ್ಮ ಮನಸ್ಸಿನಲ್ಲಿ ಬರುತ್ತದೆ ಹೀಗಿದ್ದರೂ ನಾವು ಅದರ ಬಗ್ಗೆ ಪ್ರಶ್ನಿಸುತ್ತಿಲ್ಲ ಕೋಮುಗಲಭೆಗಳು ನಡೆಯುತ್ತಿವೆ, ಎಲ್ಲಾ ಕಡೆಗೆ ಮತೀಯ ಸಮಾಜದಲ್ಲಿ ಬಿರುಕು ಹುಟ್ಟಿಸತಕ್ಕಂಥ ಕೆಲಸ ಕಾರ್ಯಗಳು ನಡೆಯುತ್ತಿವೆ, ಈಗಾಗಲೇ ಮಂಗಳೂರಿನಲ್ಲಿ ಗಲಭೆಯಾಗಿವೆ ಬೇರೆ ಕಡೆಗೂ ಕೂಡ ಗಲಭೆಯಾಗತಕ್ಕಂಥದ್ದು ಇದೆ ಕರ್ನಾಟಕದ ರಾಜಧಾನಿಯಾಗಿರತಕ್ಕಂಥ ಬೆಂಗಳೂರಿನಲ್ಲಿ ಇತ್ತೀಚಿನ ದಿನದಲ್ಲಿ ಏನು ಗಲಭೆಯಾಗಿದೆ ಅದು ಶೋಭೆ ತರತಕ್ಕಂಥದ್ದು ಅಲ್ಲ ಇವತ್ತು ಗೃಹ ಮಂತ್ರಿಗಳು ಕೂಡ ನಮ್ಮ ಎದುರಿನಲ್ಲಿ ಇದ್ದಾರೆ ಇವೆಲ್ಲಾ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭದಲ್ಲಿ, ವಿಶೇಷವಾಗಿ ಆರು ತಿಂಗಳ ನಂತರ ಸದನ ಸೇರಿದಾಗ ನಾವೇನು ನಮ್ಮ ಪಕ್ಷದಲ್ಲಿ ನಿರ್ಣಯ ತೆಗೆದುಕೊಂಡಿದ್ದೇವೆ ಅದರ ಪ್ರಕಾರ ಆ ಎಲ್ಲಾ ವಿಚಾರ ಬದಿಗಿಟ್ಟು, ರಾಜ್ಯದ ರೈತರಿಗೆ ಏನು ಮಾಡಿದಿರಿ? 128 ತಾಲ್ಲೂಕುಗಳಲ್ಲಿ ಏನು ಒಂದು ವಾತಾವರಣ ಇದೆ, ಯಾವ ರೀತಿಯಾಗಿ ಕೆಲಸ ಕಾರ್ಯಗಳು ನಡೆಯಬೇಕಾಗಿವೆ, ಕೇಂದ್ರದಿಂದ ಬಂದಂಥ ಹಣವೇನಿದೆ, ಇದರಲ್ಲಿ ಎಷ್ಟರಮಟ್ಟಿಗೆ ಉಪಯೋಗವಾಗಿದೆಂದು ನಾವು ಕೇಳುವುದು ಬಹಳ ಅಗತ್ಯವಾಗಿದೆ ಹೀಗಾಗಿ ಇದು ಮಹತ್ವದ ವಿಷಯವೆಂದು ಸದನದಲ್ಲಿ ನಿಲುವಳಿ ಸೂಚನೆ ಮುಖಾಂತರ ಇವತ್ತು ಇದನ್ನು ತಂದಿದ್ದೇವೆ ಈಗಾಗಲೇ ನಮ್ಮ ಮಾನ್ಯ ರಮೇಶ್ ಕುಮಾರ್ ರವರು ಮತ್ತು ದೇಶಪಾಂಡೆಯವರು ಮಾತನಾಡಿದ್ದಾರೆ, ಅದರಂತೆ ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಮತ್ತು ಸಿದ್ದರಾಮಯ್ಯನವರು ಕೂಡ ಇದರ ಬಗ್ಗೆ ಬೆಳಕು ಚೆಲ್ಲುತ್ತಿದ್ದಾರೆ ಇವತ್ತು ಏಕೆ ಈ ಮಾತು ಬರುತ್ತಿದೆ ಎಂದರೆ, ಮಾನ್ಯ ಪ್ರಕಾಶ್‌ರವರು ಯಾವಾಗಲೂ ಕೂಡ ತಮ್ಮದೇ ಆದ ಭಾಷೆ ನೀತಿಯಲ್ಲಿ ಬಹಳ ಸಮಾಧಾನವಾಗಿ ತಮ್ಮ ವಾದವನ್ನು ಮಂಡಿಸುತ್ತಾರೆ ಇದರ ಬಗ್ಗೆ ಕೌಲ್ ಅಂಡ್ ಶಕ್ಧಾರ್ ಪುಸ್ತಕ ನೋಡತಕ್ಕಂಥ ವಿಷಯವಲ್ಲ ತಾವೂ ಕೂಡ ಅಧ್ಯಕ್ಷರಾಗಿ ಕೆಲಸ ಮಾಡಿದ್ದೀರಿ ಮಾನ್ಯ ವೈಕುಂಠ ಬಾಳಿಗರವರು ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ಹಿರಿಯ ಸದಸ್ಯರಾಗಿದ್ದಂಥ ಮಾನ್ಯ ಗೋಪಾಲ ಗೌಡರು ಇದ್ದಾಗ ಜನಸಾಮಾನ್ಯರ ಬಗ್ಗೆ ಆಗಿನ ಸರ್ಕಾರ ಯಾವರೀತಿಯಾಗಿ ಚಿಂತನೆ ಮಾಡಿದಂಥ ಘಟನೆಗಳು ತಮಗೆಲ್ಲಾ ಗೊತ್ತಿರಬಹುದು ಇವತ್ತಿನ ದಿವಸ ಈ ಸದನಲ್ಲಿ ಜನಸಾಮಾನ್ಯರ ಅಭಿಪ್ರಾಯದ ಬಗ್ಗೆ ಮತ್ತು ರೈತರ ಹಾಗೂ ಮಣ್ಣಿನ ಮಗನ ಬಗ್ಗೆ ಶಿಖರದ ಮಟ್ಟಕ್ಕೆ ಚಿಂತನೆ ಮಾಡತಕ್ಕಂಥ ಮತ್ತು ಬಹಳ ಮಾತನಾಡತಕ್ಕಂಥ ಜನ ಈ ಸಮ್ಮಿಶ್ರ

ಸರ್ಕಾರದಲ್ಲಿದ್ದಾರೆ ನಾವುಗಳು ಒಂದಾಗಿ ಕೇವಲ ಜನಸಾಮಾನ್ಯರ ಸಮಸ್ಯೆಗಳನ್ನು ಬಗೆಹರಿಸತಕ್ಕಂಥ ಸರ್ಕಾರ ಎಂದು ಹೇಳುತ್ತಿದ್ದಾರೆ ಆದರೆ, ಅವರು ಆ ಕಡೆ ಈ ಕಡೆಯಿಂದ ಬಂದು ರಾಜಭವನದಲ್ಲಿ ಒಂದಾಗಿದ್ದು ಬೇರೆ ನೀವೇನು ಚುನಾವಣೆಗೆ ಹೋಗಿ ಮನ್ನಣೆ ಪಡೆದುಕೊಂಡು ಬಂದವರಲ್ಲ ಮತ್ತೆ ಈ ಸರ್ಕಾರ ಬಹಳ ದಿವಸ ಇರುವುದಿಲ್ಲವೆಂದು ಮೇಲಿಂದ ಮೇಲೆ ಹೇಳುತ್ತಿದ್ದೇವೆ ಈ ಸರ್ಕಾರ ಪಥನವಾಗಬೇಕೆಂದು ನಾವೇನು ಹೇಳುತ್ತಿಲ್ಲ ಆದರೆ, ನಿಮಗೆ ಅಧಿಕಾರ ಕೊಟ್ಟಿದ್ದಾರೆ ಈ ಒಂದು ವರ್ಷದ ಅವಧಿಯಲ್ಲಿ ಆಗಿರುವಂತಹವುಗಳನ್ನು ನಾವು ಸುಮ್ಮನೆ ಕುಳಿತು ನೋಡುತ್ತಿದ್ದೇವೆ ಈ ಒಂದು ವರ್ಷದ ನಿಮ್ಮ ಆಡಳಿತದ ಅವಧಿಯಲ್ಲಿ ಯಾವುದೇ ಕೆಲಸಕ್ಕೂ ಎಲ್ಲಿಯೂ ಕೂಡ ಹಣವನ್ನು ಬಿಡುಗಡೆ ಮಾಡಿಲ್ಲ ಬೊಕ್ಕಸದಲ್ಲಿ ಹಣ ಇದೆ ಎಂದು ಅವರು ಹೇಳುತ್ತಾರೆ ಆದರೆ, ಎಲ್ಲಿಂದ ಹಣ ತರಬೇಕೆಂದು ಇವರು ಹೇಳುತ್ತಿದ್ದಾರೆ ಇವತ್ತು ಸರ್ಕಾರ ನಡೆಸತಕ್ಕಂಥ ಜನರು ಜವಾಬ್ದಾರಿಯುತವಾಗಿ ತಿಳಿದುಕೊಂಡು ಹೇಳಬೇಕಾಗುತ್ತದೆ ಸಾಲ ಮನ್ನಾ ಮಾಡುತ್ತೇವೆಂದು ಪ್ರಸ್ತಾಪ ಮಾಡಿದ್ದಾರೆ ಇವತ್ತಿನದಿವಸ ರೈತರು ಬಹಳ ಕಷ್ಟದ ಪರಿಸ್ಥಿತಿಯಲ್ಲಿರುವಂಥ ಕಾಲದಲ್ಲಿ ಸಾಲ ಮನ್ನಾ ಮಾಡುತ್ತಾರೆಂದು ಕಾಯುತ್ತಿದ್ದಾರೆ ಅದರೆ, ನಾವು ಹೇಳುವುದೇನೆಂದರೆ, ಸಾಲ ಮನ್ನಾ ಮಾಡುವುದಕ್ಕೆ ಸುಮಾರು 12 ರಿಂದ 15 ಸಾವಿರ ಕೋಟಿ ರೂಪಾಯಿ ಬೇಕಾಗುತ್ತದೆ ಆದರೆ, ಕೇವಲ 82 ಕೋಟಿ ರೂಪಾಯಿ ಬಜೆಟ್‌ನಲ್ಲಿ ಪ್ರೊವೈಡ್ ಮಾಡಿದ್ದೀರಿ ಆದ್ದರಿಂದ , ಇಷ್ಟು ಹಣ ಇಟ್ಟುಕೊಂಡು ಯಾವರೀತಿಯಾಗಿ ಸಾಲ ಮನ್ನಾ ಮಾಡುತ್ತೀರಿ ಎಂಬುದನ್ನು ಹೇಳಬೇಕಾಗುತ್ತದೆ ಇದರಲ್ಲಿಯೂ ಕೂಡ ಮುಖ್ಯ ಮಂತ್ರಿ ಮತ್ತು ಉಪ ಮುಖ್ಯ ಮಂತ್ರಿ ನಡುವೆ ಸ್ಪರ್ಧೆ ನಡೆದಿದೆ ಇವತ್ತಿನದಿವಸ ರೈತರ ಕೆಲಸ ಕಾರ್ಯಗಳು ಆಗುತ್ತಿಲ್ಲ ಮತ್ತೆ ಕಂದಾಯ ಇಲಾಖೆ ಕೂಡ ರೈತರ ಬಗ್ಗೆ ಕಾಳಜಿ ವಹಿಸುತ್ತಿಲ್ಲ ನಾವು ಬೆಳಗಾಂ ಅದಿವೇಶನದಲ್ಲಿಯೂ ಕೂಡ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೆವು ಅದೇನೆಂದರೆ, 128 ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ನಿಮ್ಮ Action plan ಏನೆಂದು ನಾವು ಕೇಳಿದ್ದೆವು ಇವತ್ತಿನದಿವಸ ನೀವು ಮಾಡತಕ್ಕಂಥ ಕೆಲಸವಾದರು ಏನು? ಜಿಲ್ಲಾಧಿಕಾರಿಗಳು ಎಷ್ಟು ಹಳ್ಳಿಗೆ ಹೋಗಿದ್ದಾರೆ? ಮತ್ತೆ ಬೆಂಗಳೂರಿನಲ್ಲಿ ಕುಳಿತುಕೊಂಡಿರುವ ಅಧಿಕಾರಿಗಳು ಎಷ್ಟು ಕಡೆ ಹೋಗಿ ನಿರ್ವಹಣೆ ಮಾಡಿದ್ದಾರೆ? ಮಾನ್ಯ ಪ್ರಕಾಶ್‌ರವರೆ, ನಾನು ಹೇಳುವುದೇನೆಂದರೆ, ಕೇವಲ ಶಬ್ದಗಳ ಮುಖಾಂತರ ರಾಜ್ಯದ ಜನತೆಗೆ ಮೋಸ ವಂಚನೆ ಮಾಡತಕ್ಕಂಥದು ಬಹಳ ದಿವಸ

ನಡೆಯುವುದಿಲ್ಲ ಮತ್ತೆ ಪತಿಕಾ ಹೇಳಿಕೆಯ ಮುಖಾಂತರ ಕೂಡ ಬಹಳ ದಿವಸ ಜೀವಂತವಾಗಿರುವುದಕ್ಕೆ ಸಾಧ್ಯವಿಲ್ಲ ಇವತ್ತು ಏನಾದರೂ ಸಮ್ಮಿಶ್ರ ಸರ್ಕಾರ ಘನತೆ ಗೌರವ ಕಾಪಾಡಿಕೊಂಡು ಹೋಗುವಂಥ ರೀತಿಯಾಗಬೇಕಾದರೆ, ತಾವು ಈಗಾಗಲೇ ಮಾನ್ಯ ದೇವರಾಜ ಅರಸುರವರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ 1972ರಲ್ಲಿ ನಾನು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮೊದಲನೆ ಸಾರಿ ಶಾಸಕರಾಗಿದ್ದೆವು ಆ ಸಂದರ್ಭದಲ್ಲಿ ಮಾನ್ಯ ದೇವರಾಜ ಅರಸುರವರು ಗುಲ್ಬರ್ಗ ಜಿಲ್ಲೆಯಲ್ಲಿದ್ದಂತಹ ಬರಗಾಲ ಪರಿಸ್ಥಿತಿಯನ್ನು ನಿರ್ವಹಣೆ ಮಾಡುವಾಗ ಅರ್ಧಮಂತ್ರಿಗಳಾಗಿದ್ದಂತಹ ಮಾನ್ಯ ಘೋರ್ಪಡೆಯವರು ಸಹ ಒಂದು ತಿಂಗಳ ಕಾಲ ಅಲ್ಲಿಯೇ ಕುಳಿತುಕೊಂಡು ಬರಗಾಲದ ನಿರ್ವಹಣೆಯನ್ನು ಮಾಡಿದ್ದರು ಮತ್ತೆ ಆ ಸಂದರ್ಭದಲ್ಲಿ ಬರತಕ್ಕಂಥ ಎಡರುತೊಡರುಗಳ ಬಗ್ಗೆ ಅಲ್ಲಿಯೇ ಒಂದು ನಿರ್ದಿಷ್ಟವಾದ ಆದೇಶವನ್ನು ಕೊಡುತ್ತಿದ್ದರು ಆದರೆ, ಇವತ್ತಿನ ದಿವಸ ಯಾವ ಮಂತ್ರಿಗಳಾಗಲಿ ಅಥವಾ ಮುಖ್ಯ ಕಾರ್ಯದರ್ಶಿಯವರು ಹೋಗಿ ಅಲ್ಲಿ ಕುಳಿತುಕೊಂಡಿದ್ದೀರಿ? ಹೆಲಿಕಾಪ್ಟರ್ ಮುಖಾಂತರ ಹೋಗಿ ಕೇವಲ ಜಿಲ್ಲಾಧಿಕಾರಿಯವರ ಜೊತೆ ಸಮಾಲೋಚನೆ ಮಾಡಿದರೆ ಆಗುವುದಿಲ್ಲ ಮತ್ತೆ ಹಳ್ಳಿಗಳಿಗೆ ಹೋಗಿ ವಾಸ್ತವ್ಯ ಹೂಡಿ ಜನಾಭಿಪ್ರಾಯ ಮೂಡಿಸುವಂಥ ಕೆಲಸ ಮಾಡುವುದಕ್ಕೆ ಹೋಗಿರತಕ್ಕ ದಾಟಿ ಇವತ್ತಿನ ದಿವಸ ರೈತರಲ್ಲಿ ವಿಶ್ವಾಸ ಮೂಡಿಸುವಂಥ ಕೆಲಸವಲ್ಲ ಇವತ್ತಿನ ದಿವಸ 128 ತಾಲ್ಲೂಕುಗಳಲ್ಲಿ ಬರಗಾಲ ಬಂದಿದೆ ಕಳೆದ ಫೆಬ್ರವರಿ 3ರಂದು ತಮ್ಮ ಸರ್ಕಾರ ಅಧಿಕಾರಕ್ಕೆ ಬಂತು ಮತ್ತೆ ವಿಧಾನ ಸೌಧದ ಎದುರುಗಡೆ ತಾವೆಲ್ಲರೂ ಪ್ರಮಾಣ ವಚನ ಸ್ವೀಕಾರ ಮಾಡಿದ್ದೀರಿ ಇದು ಸಂತೋಷದ ವಿಷಯ ಕರ್ನಾಟಕ ರಾಜ್ಯದಲ್ಲಿ ಬಿಜೆಪಿ ಮತ್ತು ಜನತಾದಳ (ಎಸ್) ಪಕ್ಷ ಗಳೆರಡು ಕೂಡಿ ಸರ್ಕಾರ ರಚನೆ ಮಾಡತಕ್ಕಂಥದು ಕೂಡ ಪ್ರತಿಕ್ರಿಯವಾದ ಶಕ್ತಿಗಳಾಗಲಿ, Reactionary forces ಆಗಲಿ ಈ ರಾಷ್ಟ್ರದ ಇತಿಹಾಸದಲ್ಲಿ ನಾವು ವಹಿಸಿರುವಂತಹ ಪಾತ್ರದ ಬಗ್ಗೆ ನಾವು ಪ್ರಶ್ನೆ ಮಾಡುವುದಿಲ್ಲ ಆದರೆ, ಇವತ್ತು ಏನಾಗಿದೆ ಎಂದರೆ, ನೀವು ಸರ್ಕಾರ ರಚನೆ ಮಾಡಿ ಒಂದು ವರ್ಷ ಮುಗಿಯಿತು ಈ ಒಂದು ವರ್ಷದಲ್ಲಿ 172 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹಾಗೆಯೇ, ಜನವರಿ ತಿಂಗಳಲ್ಲಿ 10 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಆದ್ದರಿಂದ ಇದರ ಬಗ್ಗೆ ನೀವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಇವತ್ತಿನದಿವಸ ಮಹಾರಾಷ್ಟ್ರ ರಾಜ್ಯದಲ್ಲಿ ಕೂಡ ರೈತರ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ ವಿಶೇಷವಾಗಿ

ವಿದರ್ಭ ಕ್ಷೇತ್ರದಲ್ಲಿ ಹೆಚ್ಚಾಗಿ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ ಮಹಾರಾಷ್ಟ್ರದವರೆ ಆದ ಮಾನ್ಯ ಶರದ್‌ಪವಾರ್‌ರವರು ಇವತ್ತು ನಮ್ಮ ರಾಷ್ಟ್ರದ ಕೃಷಿ ಸಚಿವರಾಗಿದ್ದಾರೆ ಇವರು ಮಾನ್ಯ ಮನಮೋಹನ್ ಸಿಂಗ್‌ರವರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು ಪದೇಪದೇ ಆಗುತ್ತಿರುವ ರೈತರ ಆತ್ಮಹತ್ಯೆ ಪ್ರಕರಣಗಳಿಗೆ ಅಂತಿಮವಾಗಿ ,ಮತ್ತು ಶಾಶ್ವತ ಸೆಲೂಷನ್ ಕಂಡು ಹಿಡಿಯಬೇಕೆಂಬ ದೃಷ್ಟಿಯಿಂದ ದೆಹಲಿಯಲ್ಲಿ ಚರ್ಚೆ ಕೂಡ ಮಾಡಲಾಗಿದೆ

(ಈ ಹಂತದಲ್ಲಿ ಮಾನ್ಯ ಆರಗಜ್ಞಾನೇಂದ್ರರವರು ಆಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು ಕರ್ನಾಟಕ ರಾಜ್ಯದಲ್ಲಿ ಬೆಳಗಾಂ , ದಾವಣಗೆರೆ, ಹಾಸನ , ಮಡಿಕೇರಿ, ಚಿಕ್ಕಮಗಳೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಬಹಳಷ್ಟು ರೈತರ ಆತ್ಮಹತ್ಯೆಗಳು ಆಗಿವೆ ಆದ್ದರಿಂದ ವಿದರ್ಭ ಮಾದರಿಯಲ್ಲಿಯೇ ಇಲ್ಲಿನ ರೈತರಿಗೂ ಹಣ ಕೊಡಬೇಕೆಂದು ಕೇಳಲಾಗಿತ್ತು 6 ತಿಂಗಳ ಹಿಂದೆ ಈ 6 ಜಿಲ್ಲೆಗಳಿಗೆ ವಿದರ್ಭ ಮಾದರಿಯಲ್ಲಿ ಹಣ ಕೊಡುವುದಕ್ಕಾಗಿ 2689 ಕೋಟಿ ರೂಪಾಯಿ ಕೊಟ್ಟಿದ್ದಾರೆ ಆದರೆ, ಇದಕ್ಕೆ ಇದುವರೆಗೂ Action plan ಮಾಡಿಲ್ಲ ಯಾವರೀತಿಯಾಗಿ ಈ ಹಣ ಖರ್ಚು ಮಾಡಬೇಕೆಂದೂ ಸಹ ಆಗಿಲ್ಲ ಮಾನ್ಯ ಪ್ರಕಾಶ್‌ರವರೆ, ನಾವು ನಿಲುವಳಿ ಸೂಚನೆಯ ಮೇಲೆ ಈ ವಿಷಯ ತಂದು ಗಂಭೀರವಾದಂತಹ ಆರೋಪ ಏತಕ್ಕಾಗಿ ಮಾಡುತ್ತಿದ್ದೇವೆಂದರೆ, ಕೇಂದ್ರ ಸರ್ಕಾರದಿಂದ ಬಂದಂಥ ಹಣವನ್ನು ನೀವು ಉಪಯೋಗ ಮಾಡುತ್ತಿಲ್ಲ ಇವತ್ತಿನ ದಿವಸ ಆ ಒಂದು ಸಮಿತಿಗೆ PWD Minister ಅವರನ್ನು ಹಾಕಿದ್ದೀರಿ ಆದರೆ, ಅದರಲ್ಲಿ ಕಂದಾಯ ಮಂತ್ರಿಗಳಿಲ್ಲ ಮತ್ತೆ ಗ್ರಾಮೀಣ ಅಭಿವೃದ್ಧಿ ಇಲಾಖೆಯ ಮಂತ್ರಿಗಳೂ ಸಹ ಇಲ್ಲ Action Plan prepare ಮಾಡಿಲ್ಲ ಆದ್ದರಿಂದ ನೀವು ಯಾವ ರೀತಿಯಾಗಿ ರೈತರ ಹಿತರಕ್ಷಣೆ ಮಾಡುತ್ತಿದ್ದೀರಿ? ನಾವು ಹೋದಸಲ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ಕೊಟ್ಟಂಥ ಸಂದರ್ಭದಲ್ಲಿ ನಾವು ಮತ್ತು ಮಾನ್ಯ ಖರ್ಗೆಯವರು ಇದ್ದಾಗ ನಿಮ್ಮ ಎದುರುಗಡೆಯೇ ಮಾನ್ಯ ಪ್ರಧಾನ ಮಂತ್ರಿಯವರ ಜೊತೆ ದೂರವಾಣಿ ಮುಖಾಂತರ ಮಾತನಾಡಿದ್ದೇವೆ ಪ್ರಧಾನ ಮಂತ್ರಿಯವರು ಬೆಳಗಾಂಗೆ ಬರುತ್ತಿದ್ದರು ಆದರೆ, ಫ್ಲೈಟ್ ಟೇಕ್ ಅಫ್ ಆಗಲಿಲ್ಲ ಮಾನ್ಯ ಶರದ್‌ಪವಾರ್‌ರವರು ಬಂದರು ತಾವೂ ಕೂಡ ಆ ಸಭೆಯಲ್ಲಿದ್ದೀರಿ ಆ ಸಭೆಯಲ್ಲಿ ನಾವೆಲ್ಲ ಮಾತನಾಡಿದ ಮೇಲೆ ಪ್ರವಾಹದಿಂದ

5 00 P M

ಪೀಡಿತವಾಗಿರುವ 5 ಜಿಲ್ಲೆಗಳ ಹಳ್ಳಿಗಳನ್ನು ಬೇರೆ ಕಡೆಗೆ ಶಿಫ್ಟ್ ಮಾಡಿ ಪುನರ್ವಸತಿ ಕಲ್ಪಿಸಿ ಕೊಡುವುದಾಗಿ ಆ ಸಂದರ್ಭದಲ್ಲಿ ಅವರು ಹೇಳಿದರು ಕೇವಲ ಬೆಳಗಾಂ ಜಿಲ್ಲೆಗೆ 172 ಕೋಟಿ ರೂಪಾಯಿ ಖರ್ಚಾಗಿದೆ ನಾನು ಮೊನ್ನೆದಿವಸ ಬೆಳಗಾಂಗೆ ಹೋದಾಗ ಜಿಲ್ಲಾಧಿಕಾರಿಯವರ ಜೊತೆ ಸಮಾಲೋಚನೆ ಮಾಡಿದಂತಹ ಸಂದರ್ಭದಲ್ಲಿ ಈ ವಿಷಯ ಹೇಳಿದರು ಹಿಂದೆ ತಾವು ಕಂದಾಯ ಇಲಾಖೆಯ ಮಂತ್ರಿಗಳಾಗಿದ್ದೀರಿ ಮತ್ತೆ ಮಾನ್ಯ ಸಿದ್ದರಾಮಯ್ಯನವರ ನಂತರ ಉಪ ಮುಖ್ಯ ಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಪ್ರವಾಹ ಪೀಡಿತ ಜಿಲ್ಲೆಗಳಿಗೆ 315 ಕೋಟಿ ರೂಪಾಯಿ ಕೊಡಲಾಗಿತ್ತು ಇದು ತಮಗೆಲ್ಲಾ ಗೊತ್ತಿರುವಂತ ವಿಷಯವಾಗಿದೆ ಆದರೆ, ಇವತ್ತು ಏಕೆ ಆಗುತ್ತಿಲ್ಲವೆಂದರೆ, ಜನಾಭಿಪ್ರಾಯ ಮೂಡಿಸುವಂಥ ರೀತಿಯಲ್ಲಿ ಕೆಲಸ ಕಾರ್ಯಗಳು ಆಗುತ್ತಿಲ್ಲ ಒಂದೂ ಜಿಲ್ಲೆಯಲ್ಲಿಯೂ ಕೂಡ ಈ ಒಂದು ಕೆಲಸ ಮಾಡುತ್ತಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ ಮತ್ತೆ ನಮ್ಮ ರಾಜ್ಯದಲ್ಲಿ ಬರ ಪೀಡಿತ ಪ್ರದೇಶ 128 ತಾಲ್ಲೂಕುಗಳೆಂದು ತಾವು ಹೇಳಿದ್ದೀರಿ ಈಗಾಗಲೇ ಜಿಲ್ಲಾಧಿಕಾರಿಗಳು ಬೇಡಿಕೆಯ ಪಟ್ಟಿಯನ್ನು ಕೊಟ್ಟಿದ್ದಾರೆ ಇದಕ್ಕಾಗಿ 2271 ಕೋಟಿ ರೂಪಾಯಿ ಬೇಕಾಗುತ್ತದೆ ಆದರೆ, ಇಲ್ಲಿಯವರೆಗೆ ಕೇವಲ 261 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದೀರಿ ಮತ್ತೆ 330 ಕೋಟಿ ರೂಪಾಯಿ ಬಿಡುಗಡೆ ಮಾಡಿದ್ದೇವೆಂದು ಕಂದಾಯ ಇಲಾಖೆಯವರು ಹೇಳುತ್ತಾರೆ ಆದರೆ, ಈ ಹಣ ಇನ್ನೂ ಕೂಡ ಜಿಲ್ಲೆಗಳಿಗೆ ಮುಟ್ಟಿಲ್ಲ ಇವತ್ತಿನ ದಿವಸ ಬೇಡಿಕೆಯ ಶೇಕಡ 11 ರಷ್ಟು ಹಣ ಮಾತ್ರ ತಾವು ಬಿಡುಗಡೆ ಮಾಡಿದ್ದೀರಿ ಇಲ್ಲಿಯವರೆಗೆ ಬಂದಿರುವ ಮಾಹಿತಿ ಪ್ರಕಾರ 151 ಕೋಟಿ ರೂಪಾಯಿಗೆ ಒಟ್ಟಾರೆ ಬೇಡಿಕೆಯ ಶೇಕಡ 7 ರಷ್ಟು ಹಣವನ್ನು ಬಿಡುಗಡೆ ಮಾಡಿಲ್ಲ ಪ್ರಕೃತಿ ಪರಿಹಾರ ವಿಕೋಪ ನಿಧಿಯಿಂದ ಕೇಂದ್ರ ಸರ್ಕಾರ 90 25 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಮತ್ತೆ 2006–2007ನೇ ಸಾಲಿನಲ್ಲಿ 226 ಕೋಟಿ ರೂಪಾಯಿ ಬಿಡುಗಡೆಯಾಗಿದೆ ಮತ್ತೆ 2007–2008ನೇ ಸಾಲಿಗೆ ಬಿಡುಗಡೆಯಾದ ಮುಂಗಡ 27 ಕೋಟಿ ಒಟ್ಟಾರೆ 344 ಕೋಟಿ ರೂಪಾಯಿ ಈಗಾಗಲೇ ತಮಗೆ ಬಂದಿದೆ ಮತ್ತೆ 18 ಲಕ್ಷ ಟನ್ ಆಹಾರಧಾನ್ಯ ಬಂದಿದೆ ಇದೂ ಸೇರಿ 330 ಕೋಟಿ ರೂಪಾಯಿಗಳಾಗುತ್ತದೆ ಇವತ್ತಿನ ದಿವಸ ಪ್ರವಾಹಕ್ಕೆ ಸಿಲುಕಿದ

ಗುಲ್ಬರ್ಗ, ಬಿಜಾಪುರ, ಬೆಳಗಾಂ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಿಗೆ 2005–2006ನೇ ಸಾಲಿನಲ್ಲಿ ನೆರೆ ಪರಿಹಾರ ಕಾಮಗಾರಿಗಳಿಗಾಗಿ 3041 ಕೋಟಿ ರೂಪಾಯಿ ಬಿಡುಗಡೆಯಾಗಿತ್ತು ನೆರೆ ಪರಿಹಾರ ಕಾಮಗಾರಿಗಳಿಗಾಗಿ 8 ಜಿಲ್ಲೆಗಳಲ್ಲಿ ಒಟ್ಟು 3041 ಕೋಟಿ ರೂ ಗಳ ಹಣ ಬಿಡುಗಡೆಯಾಗಿತ್ತು ಇದರಲ್ಲಿ ಖರ್ಚಾಗಿದ್ದು 315 ಕೋಟಿ ರೂ ಗಳು, 2006–07 ರಲ್ಲಿ ಬಿಡುಗಡೆಯಾಗಿರುವ ಹಣ ಕೇವಲ 123 ಕೋಟಿ ರೂ ಗಳಲ್ಲಿ ಅದರಲ್ಲಿ 96 ಕೋಟಿ ರೂ ಗಳು ಖರ್ಚಾಗಿದೆ ನಾನು ಏಕೆ ಈ ವಿವರವನ್ನು ಕೊಡುತ್ತಿದ್ದೇನೆಂದರೆ, ಹೋದ ವರ್ಷದ ಸಮ್ಮಿಶ್ರ ಸರ್ಕಾರದಲ್ಲಿ ಶ್ರೀಮಾನ್ ಸಿದ್ದರಾಮಯ್ಯನವರು ಹಣಕಾಸಿನ ಸಚಿವರು ಹಾಗೂ ಉಪ ಮುಖ್ಯಮಂತ್ರಿಗಳಾಗಿದ್ದರು ಮಾನ್ಯ ಪ್ರಕಾಶ್‌ರವರೆ, ತಾವು ಕಂದಾಯ ಮಂತ್ರಿಗಳಾಗಿದ್ದಿರಿ ತದನಂತರ ತಾವು ಉಪ ಮುಖ್ಯಮಂತ್ರಿಗಳಾಗಿದ್ದಿರಿ, ಇವತ್ತು ರಾಜ್ಯದಲ್ಲಿ ವಿಶೇಷವಾಗಿ ಜಿಲ್ಲೆಯಲ್ಲಿ ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ರೀ–ಹ್ಯಾಬಿಲಿಟೇಶನ್ ಸೆಂಟರ್ ಸಲುವಾಗಿ ಎಲ್ಲಾ ಕಡೆಗೆ ಇವತ್ತು ಕೇಂದ್ರ ಸರ್ಕಾರದಿಂದ ಹಣವನ್ನು ಒದಗಿಸಿದ್ದಾರೆ ಇವತ್ತು ಯಾವ ಬಾಬತ್ತಿನಲ್ಲಿ ಕೂಡ ಪ್ರವಾಹಪೀಡಿತ ಪ್ರದೇಶಕ್ಕೆ ಹಣವನ್ನು ಬಿಡುಗಡೆ ಮಾಡತಕ್ಕಂಥದ್ದು ಅಲ್ಲ, ವ್ಯವಸ್ಥಿತವಾಗಿ ಕೇಂದ್ರ ಸರ್ಕಾರಕ್ಕೆ ಹಣವನ್ನು ಕೇಳತಕ್ಕಂಥದ್ದು ಕೂಡ ಅಲ್ಲ, action plan prepare ಮಾಡತಕ್ಕಂಥದ್ದು ಅಲ್ಲ, ಅಧಿಕಾರಿಗಳಿಗೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕಂಥದ್ದು ಅಲ್ಲ, ಇವತ್ತು ಈ ರೀತಿಯಾಗಿ ತಾವು ಏನು ಕೆಲಸ ಕಾರ್ಯಗಳನ್ನು ಮಾಡುತ್ತಿದ್ದೀರಿ ಅದಕ್ಕಾಗಿ ಇವತ್ತಿನ ದಿವಸ ನಾವು ತಮ್ಮ ಮೇಲೆ ಆರೋಪವನ್ನು ಮಾಡುತ್ತಿದ್ದೇವೆ ತಾವು ಹೇಳುತ್ತೀರಿ ಉತ್ತರವನ್ನು ಕೊಡುತ್ತೇವೆ, ಉತ್ತರವನ್ನು ಕೊಡಬೇಕಾದರೆ ಮಾನ್ಯ ಶಿವರಾಜ್ ಪಾಟೀಲ್‌ರು ಕೂಡ ತಮಗೆ ಹೆಚ್ಚಿನ ಪರಿಚಿತರು, ಕೇಂದ್ರದ ಗೃಹ ಸಚಿವರಾಗಿದ್ದಾರೆ ನಾವು ಮತ್ತು ಮಾನ್ಯ ಖರ್ಗೆಯವರು ಎಲ್ಲ ಇತರ ನಾಯಕರು ಕೂಡಿಕೊಂಡು we represented with the Prime Minister, ನಾವು ಮಾನ್ಯ ಶಿವರಾಜ್ ಪಾಟೀಲ್‌ರಿಗೆ ಭೇಟಿಯಾದೆವು ತಾವು ನೇರವಾಗಿ ಇದರ ಮಂತ್ರಿಗಳಾಗಿದ್ದೀರಿ, ತಾವು ಒಂದು ಸಲ ಕರ್ನಾಟಕಕ್ಕೆ ಬಂದು ಕರ್ನಾಟಕದ ಪರಿಸ್ಥಿತಿಯನ್ನು ನೋಡಿಕೊಂಡು ಹೋಗಬೇಕು, ನೀವು ಆವತ್ತು ಇರಲಿಲ್ಲ, ಮಾನ್ಯ ಜಗದೀಶ್ ಶೆಟ್ಟರ್‌ರವರು ನಾವು ಮಾನ್ಯ ಖರ್ಗೆಯವರು ಮಾನ್ಯ ಯಡಿಯೂರಪ್ಪನವರು ಎಲ್ಲರೂ ಕೂಡಿ ಎಲ್ಲಾ ಕಡೆ ವೈಮಾನಿಕ ಸರ್ವೆಯನ್ನು ಮಾಡಿದ್ದೇವೆ

ಮೂರನೇ ಮಹಡಿಯಲ್ಲಿ ಮೀಟಿಂಗ್ ಆಯಿತು ಮೀಟಿಂಗ್‌ನಲ್ಲಿ ನಾವು ಏನು ಕೇಳಿದೇವು, ಒಟ್ಟಾರೆ ಸರ್ಕಾರ ನಿರೀಕ್ಷೆ ಮಾಡಿದಕ್ಕಿಂತಲೂ ಹೆಚ್ಚಿಗೆ 250 ಕೋಟಿ ರೂ ಗಳ ಹಣವನ್ನು ಬಿಡುಗಡೆ ಮಾಡಿದ್ದಾರೆ 250 ಕೋಟಿ ರೂ ಗಳ ಹಣವನ್ನು ಬಿಡುಗಡೆ ಮಾಡಿದರೆ ಇವತ್ತು ಸದನದಲ್ಲಿ ನೇರವಾಗಿ ನೀವು ಹೇಳಬೇಕು ಕೇಂದ್ರದಿಂದ ಬಂದಿರುವ 250 ಕೋಟಿ ರೂ ಗಳಲ್ಲಿ ತ್ವರಿತವಾಗಿ ತಾವು ಎಷ್ಟು ಕೋಟಿ ರೂ ಗಳ ಹಣವನ್ನು ಬಿಡುಗಡೆ ಮಾಡಿದ್ದೀರಿ ಜಿಲ್ಲೆಗಳಿಗೆ ಮುಟ್ಟಿದೆಯೋ ಇಲ್ಲವೋ ಮತ್ತು ಇವತ್ತು CRF ನಲ್ಲಿ 90 ಕೋಟಿ ರೂ ಗಳು, ಒಟ್ಟಾರೆ 113 ಕೋಟಿ ರೂ ಗಳು ಬಂದಿದೆ ನೀವು ರಾಜ್ಯದ ಬೊಕ್ಕಸದಿಂದ ಕೊಡತಕ್ಕಂಥದ್ದು ಅಲ್ಲ, ನಿಮ್ಮ ಖಜಾನೆ ಭರ್ತಿ ಇದೆ, ಅದು ನಿಮ್ಮಲ್ಲಿಯೇ ಇರಲಿ, ನೀವು ಯಾವುದಕ್ಕೆ ಉಪಯೋಗ ಮಾಡುತ್ತೀರಿ ಅದಕ್ಕೆ ಉಪಯೋಗವನ್ನು ಮಾಡಿ, ಇವತ್ತು ಕೇಂದ್ರದಿಂದ ಬಂದಿರುವ ಹಣಕ್ಕೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಮಾಡುತ್ತಿದೆ ಎಂದು ನೀವು ಏನು ಅವರ ಮೇಲೆ ಆರೋಪ ಮಾಡುತ್ತಿದ್ದೀರಿ, ಅದರ ಬಗ್ಗೆ ನೀವು ರಾಜ್ಯದ ಜನತೆಗೆ ಹೇಳಬೇಕು 128 ತಾಲ್ಲೂಕಿನಲ್ಲಿ ಬರ ಪರಿಸ್ಥಿತಿ ಉದ್ಭವವಾಗಿದೆ ಸರ್ಕಾರದ action plan ಏನಿದೆ, ಇವತ್ತು ಕುಡಿಯುವ ನೀರಿಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆ ಈಗಾಗಲೇ ನಮ್ಮ ಕೇಂದ್ರದ ರೂರಲ್ ಡೆವಲಪ್‌ಮೆಂಟ್ ಮಂತ್ರಿಗಳು ಹೇಳಿದ್ದಾರೆ ನಾವು ಈಗಾಗಲೇ 81 ಕೋಟಿ ರೂ ಗಳನ್ನು ಕೊಟ್ಟಿದ್ದೇವೆ, ಅದರಲ್ಲಿ ಹಣ ಖರ್ಚು ಆಗಿಲ್ಲವೆಂದು ಹೇಳಿದ್ದಾರೆ ತೋಟಗಾರಿಕೆ ಇಲಾಖೆಗೆ ಕೂಡ ಕೇಂದ್ರ ಸರ್ಕಾರದಿಂದ ಹಣ ಬಂದಿದೆ ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಇವತ್ತು ಪ್ರತಿದಿನ ಪ್ರತಿಯೊಬ್ಬ ಕೆಲಸ ಮಾಡುವ ಕೂಲಿಗಾರರಿಗೆ 69 ರೂ ಗಳನ್ನು ಕೊಡುತ್ತಿದ್ದಾರೆ That is the only revolutionary and historical commitment of the Prime Minister to the country's people ಯಾರೂ ಕೂಡ ಕೆಲಸ ಇಲ್ಲದೆ ಇರತಕ್ಕಂಥ ರೀತಿಯಲ್ಲಿ ಇರಬಾರದು, ಇವತ್ತು ನಾನು ಎಷ್ಟೋ ಸಲ ಮಾನ್ಯ ಉದಾಸಿಯವರಿಗೆ ಮಾತನಾಡಿದ್ದೇನೆ ಏಕೆ ಕೆಲಸವಾಗುತ್ತಿಲ್ಲ, ಚಿತ್ರದುರ್ಗದಲ್ಲಿ ಆಗುತ್ತಿದೆ ಗುಲ್ಬರ್ಗಾದಲ್ಲಿ ಮಾಡುತ್ತಿದ್ದಾರೆ, ಬೇರೆ ಕಡೆ ಕೂಡ ಮಾಡಬೇಕಾಗಿದೆ ಇವತ್ತು ಹಿಂದುಳಿದ ಪ್ರದೇಶದಲ್ಲಿ ಉದ್ಯೋಗ ಭರವಸೆ ಕಾರ್ಯಕ್ರಮದ ಅಡಿಯಲ್ಲಿ ಎಷ್ಟು ಹಣ ಬರುತ್ತದೆ utilization certificate submit ಮಾಡಿದರೆ ಅಷ್ಟು ಹಣವನ್ನು ಕೇಂದ್ರ ಸರ್ಕಾರ ನಮಗೆ ವಾಪಸ್ಸು ಕೊಡುತ್ತದೆ

ಇವತ್ತು ಬೇರೆ ಬೇರೆ ಇಲಾಖೆಯಿಂದ ಕೇಂದ್ರ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ಏನು ಹಣ ಬರುತ್ತದೆ, ಮತ್ತು ವಿಶೇಷವಾಗಿ ಇವತ್ತು CRF ನಿಂದ 250 ಕೋಟಿ ರೂ ಗಳು ಬಂದಿದೆ, ಪ್ರತಿ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದಾರೆ? ಎಷ್ಟು ಹಣ ಖರ್ಚಾಗಿದೆ? ನಮಗೆ ತಿಳಿದ ಮಟ್ಟಿಗೆ ಇವತ್ತಿನ ದಿವಸ you have released only Rs 150 crores ಅದರಲ್ಲಿ ಇವತ್ತು ಹಣವನ್ನು ಕೂಡ ಖರ್ಚು ಮಾಡಿಲ್ಲ ಅದಕ್ಕಾಗಿ ನಾವು ಬೇರೆ ವಿಚಾರ ಗಳನ್ನು ಬದಿಗಿಟ್ಟು ಮಾತನಾಡುತ್ತಿದ್ದೇವೆ ಏಕೆಂದರೆ, we have taken a decision ಇವತ್ತು ಪ್ರಶ್ನೋತ್ತರ ವೇಳೆಯನ್ನು ಹಾಳು ಮಾಡುವುದಕ್ಕೆ ಹೋಗಲಿಲ್ಲ That is the property of the House ಎಲ್ಲಾ ಜನರಿಗೆ ಕೇಳತಕ್ಕಂಥ ಹಕ್ಕಿದೆ ಅದರಲ್ಲಿ we have not interfered ಎಲ್ಲಾ ಕೆಲಸವನ್ನು ಬದಿಗೊತ್ತಿ ಗಂಭೀರವಾದಂಥ ವಿಚಾರ್‌ಗಳ ಬಗ್ಗೆ ಇವತ್ತಿನ ದಿವಸ ನಾವು ಪ್ರಸ್ತಾಪವನ್ನು ಮಾಡಿದ್ದೇವೆ ಇದಕ್ಕೆ ನೇರವಾಗಿ ಇವತ್ತಿನ ದಿವಸ ಕುಡಿಯುವ ನೀರಿನ ಬಗ್ಗೆ, ಶ್ರೀಮಾನ್ ಜಗದೀಶ್ ಶೆಟ್ಟರ್‌ರವರೆ, ಯಾವಾಗಲೂ ಕೂಡ ಎಪ್ರಿಲ್ ತಿಂಗಳಲ್ಲಿ action plan prepare ಆಗಬೇಕು You have to identify, ಒಂದು ಜಿಲ್ಲೆಯಲ್ಲಿ ಎಷ್ಟು ನಮ್ಮ ಗ್ರಾಮಗಳು ಇದೆ, ಎಷ್ಟು ಕಡೆ sensitive places ಇದೆ ಅದಕ್ಕೆ ನಾವು ಎಷ್ಟು ಹಣವನ್ನು ಕೊಡಬೇಕಾಗುತ್ತದೆ ಬೋರವೆಲ್ ಹಾಕಬೇಕಾಗುತ್ತದೆ ಇವೆಲ್ಲವನ್ನು ಕೂಡ ನಾವು ' ಬಹಳಷ್ಟು ವಿಚಾರ ಮಾಡಿ ಇವತ್ತು ಹಣವನ್ನು ಬಿಡುಗಡೆ ಮಾಡಬೇಕಾಗುತ್ತದೆ ಇವತ್ತು ಕೇವಲ ಮುಖ್ಯಮಂತ್ರಿಗಳು ಅಲ್ಲದೇ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದಾರೆ ನಾನು ಕೂಡ ವಾಸ್ತವ್ಯವನ್ನು ಹೂಡುತ್ತೇನೆ, ನಾನು ಕೂಡ ಹೋಗುತ್ತೇನೆ ಎನ್ನುವ ರೀತಿಯಲ್ಲಿ ಹೇಳುತ್ತಿದ್ದಾರೆ ಕೇವಲ ಎಲ್ಲಿಯಾದರೂ ಹೋಗಿ ಮನೆಯಲ್ಲಿ ವಾಸ ಮಾಡಿದರೆ ಆಗುವುದಿಲ್ಲ ಇವತ್ತು ಜನರ ಸಮಸ್ಯೆಗಳನ್ನು ಸರ್ಕಾರ ಬಗೆಹರಿಸತಕ್ಕಂಥ ರೀತಿಯಲ್ಲಿ ಕೆಲಸವನ್ನು ಮಾಡಬೇಕಾಗಿದೆ ಆ ವಿಷಯದಲ್ಲಿ ಇವತ್ತು ನಡೆಯುತ್ತಿಲ್ಲ ಇವತ್ತು ನನಗೆ ಬಂದಂಥ ಮಾಹಿತಿಗಳು, ಜಿಲ್ಲಾಧಿಕಾರಿಗಳನ್ನು ಸಂಪರ್ಕ ಮಾಡಿದ್ದೇನೆ ಎಷ್ಟು ಜಿಲ್ಲೆಗಳಿಗೆ ಎಷ್ಟೆಷ್ಟು ಹಣ ಬಂದಿದೆ, ಅದರಲ್ಲಿ ಎಷ್ಟು ಖರ್ಚಾಗಿದೆ, ಅವರು ಹೇಳಿದ್ದಾರೆ ಒಟ್ಟು 128 ತಾಲ್ಲೂಕುಗಳಿಗೆ ಈಗಾಗಲೇ ಫ್ಲಡ್‌ನಲ್ಲಿ 250 ಕೋಟಿ ರೂ ಗಳು ಮತ್ತು drought ನಲ್ಲಿ 1364 ಕೋಟಿ ರೂ ಗಳು ಅದರಲ್ಲಿ ಒಟ್ಟಾರೆ ಖರ್ಚಾಗಿರುವುದು 151 ಕೋಟಿ ರೂ ಗಳು, ಇವತ್ತು ಕೆಲಸವಾಗುತ್ತಿಲ್ಲ

ಕೆಲಸವಾಗಬೇಕಾದರೆ ನಾನು ಹೇಳಿದ ಹಾಗೆ ಮಾನ್ಯ ದೇವರಾಜ್ ಅರಸುರವರು ಕರ್ನಾಟಕದ ಮುಖ್ಯಮಂತ್ರಿಗಳಾದಾಗ ಯಾವ ರೀತಿಯಾಗಿ ಪರಿಣಾಮಕಾರಿಯಾಗಿ ಕೆಲಸವಾಯಿತು ಇವತ್ತು ತಾವೆಲ್ಲರೂ ಕೂಡ ಮೊಟ್ಟೆ ಕೊಡಬೇಕಾ? ಏನು ಹಾಲು ಕೊಡಬೇಕಾ? ಮಾನ್ಯ ದೇವರಾಜ್ ಅರಸುರವರ ಕಾಲದಲ್ಲಿ ಬಾಲಸುಬ್ರಮಣ್ಯಂರವರು ಜಿಲ್ಲಾಧಿಕಾರಿಗಳಾಗಿದ್ದರು ನಾವು ಕೆಲಸ ಮಾಡತಕ್ಕಂಥ ಕೂಲಿಕಾರರಿಗೆ ಮೊಟ್ಟೆಯನ್ನು ಕೂಡ ಕೊಟ್ಟಿದ್ದೇವೆ ಇವತ್ತು ಮೊಟ್ಟೆಯಾದರೂ ಕೊಡಿ, ನೀವು ಹಾಲಾದರೂ ಕುಡಿಸಿ ಮತ್ತೆ ನೀವು ಬೇರೆ ಕಾರ್ಯಕ್ರಮ ಮಾಡಿದ್ದೀರಲ್ಲಾ, ಹಿಂದೂ ಸಮಾವೇಶ ಅದಕ್ಕೆ ನಾವು ಅಡ್ಡ ಬರುವುದಿಲ್ಲ ಇವತ್ತು ರಾಜ್ಯದ ಹಿತದೃಷ್ಟಿಯಿಂದ ಏನು ಒಂದು secular ಪ್ರಗತಿಪರ ವಾದಂಥ ಒಂದು ರಾಜ್ಯವಿದೆ, ಅದಕ್ಕೆ ತಾವು ಬಹಳಷ್ಟು ವ್ಯವಸ್ಥಿತವಾದ ಕೆಲಸಗಳನ್ನು ಮಾಡಬೇಕು ಮತ್ತೆ ಇವತ್ತು ಬರಗಾಲದಿಂದ ಕರ್ನಾಟಕ ರಾಜ್ಯದಲ್ಲಿ ನರಳತಕ್ಕಂಥ ಜನ ಏನಿದ್ದಾರೆ ಅವರನ್ನು ಉಳಿಸತಕ್ಕಂಥ ಪ್ರಯತ್ನವನ್ನು ಮಾಡಬೇಕು ಚಾನುವಾರುಗಳಿಗೆ ಮೇವು ಇಲ್ಲ, ಮಾನ್ಯ ಪ್ರಕಾಶ್‌ರವರೆ, ಇವತ್ತು ಮೇವು ತರತಕ್ಕಂಥ ಏನು ಕಾರ್ಯಕ್ರಮವನ್ನು ಹಾಕಿದ್ದೀರಿ, ಮೇವು ಒಂದು ವೇಳೆ ಬರಲಿಲ್ಲವೆಂದರೆ ಎಲ್ಲಿಂದ ತರುತ್ತೀರಿ? ಮತ್ತೊಂದು ಏನೆಂದರೆ, ತಮಗೆ ಇನ್ನು ಬಜೆಟ್‌ಗೆ ಎರಡು ತಿಂಗಳ ಅವಧಿ ಮಾತ್ರ ಉಳಿದಿದೆ ಬಜೆಟ್‌ನಲ್ಲಿ ಇದ್ದಂಥ ಹಣ ಕೂಡ ಇವತ್ತು ಖರ್ಚಾಗುತ್ತಿಲ್ಲ ಬಜೆಟ್‌ನಲ್ಲಿ ಹೇಳಿದ್ದಾರೆ, ಇವತ್ತು ಮೊಟ್ಟಮೊದಲನೆಯದಾಗಿ ಮಾನ್ಯ ಯಡಿಯೂರಪ್ಪನವರು ಹೇಳಿದರು ನಾವು 43% ಪ್ರಗತಿ ಮಾಡಿದ್ದೇವೆ, ಮತ್ತೆ ಮುಖ್ಯಮಂತ್ರಿಗಳು ಹೇಳಿದರು ನಮ್ಮ spending is only 33% ಇನ್ನು ನೀವು 57% ಖರ್ಚು ಮಾಡಬೇಕಾಗುತ್ತದೆ ಇವತ್ತು ರಾಜಕೀಯ ಕಿತ್ತಾಟದಲ್ಲಿ ನಿಮ್ಮ ಭಿನ್ನಾಭಿಪ್ರಾಯಗಳ ಮಧ್ಯೆದಲ್ಲಿ ಇವತ್ತು ರಾಜ್ಯದ ಹಿತವನ್ನು ಯಾವ ರೀತಿಯಾಗಿ ಮಾಡುತ್ತೀರಿ ಎನ್ನುವ ಬಗ್ಗೆ ನಮಗೆ ಅನುಮಾನವಿದೆ ಅದಕ್ಕಾಗಿ ಇವತ್ತು ನಾವು ನಿಯಮ 69 ದಲ್ಲಿ ಚರ್ಚೆ ಮಾಡಿದ್ದೇವೆ ಇದಕ್ಕೆ ಸಮರ್ಪಕವಾದಂಥ ಉತ್ತರ ಬೇಕೇಬೇಕಾಗಿದೆ ರಾಜ್ಯದ ಜನರಿಗೆ ತಿಳಿಸತಕ್ಕಂಥ ರೀತಿಯಲ್ಲಿ, that must be very convincing reply ನೀವು ಸುಮ್ಮನೆ ಹಾಗೆ ಹೀಗೆ ಮಾಡಿ ಹೋಗತಕ್ಕಂಥದ್ದು ಅಲ್ಲ ನೇರವಾಗಿ ಕರ್ನಾಟಕ ರಾಜ್ಯದ ರೈತರ ಮನಸ್ಸಿಗೆ ಮುಟ್ಟತಕ್ಕಂಥ ರೀತಿಯಲ್ಲಿ ಇವತ್ತು ಸರ್ಕಾರ ಇದೆ ಎನ್ನತಕ್ಕಂಥದ್ದು ತಾವು ಮಾಡಬೇಕು ತಾವು ಮಾಡತಕ್ಕಂಥ ರೀತಿಯಲ್ಲಿ ತಾವು ಕೊಡತಕ್ಕಂಥ ಉತ್ತರದ

ಆಧಾರದ ಮೇಲೆ ನಾವು ಅಳತೆಯನ್ನು ಮಾಡುತ್ತೇವೆ ಯಾವ ರೀತಿಯಾಗಿ ಆಡಳಿತ ಒಂದು ವರ್ಷ ನಡೆದಿದೆ, ಸಾಕಷ್ಟು ಆಡಳಿತದ ಬಗ್ಗೆ ಬಹಳ ಸಮಾವೇಶಗಳು ಆಗುತ್ತಿವೆ ಬಹಳಷ್ಟು ಹೊಗಳುತ್ತಿದ್ದೀರಿ ಇವತ್ತು ರಾಷ್ಟ್ರ ಮಟ್ಟದಲ್ಲಿ ತಮಗೆ ನಂ 1 ಮತ್ತು ನಂ 5 ಎಂದು ಬಂದಿದೆ ಅದರ ಬಗ್ಗೆ ಅಲ್ಲ, ಇವತ್ತು ತಮ್ಮ ಆಡಳಿತ ಸರಿಯಾಗಿ ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿದೆ ಇವತ್ತು ಜನಾಭಿಪ್ರಾಯ ಮೂಡಿಸತಕ್ಕಂಥ ರೀತಿಯಲ್ಲಿ ಕೆಲಸ ಕಾರ್ಯಗಳು ಆಗಬೇಕಾಗಿದೆ ಇನ್ನು ಮುಂದೆ ಬರುವಂತಹ ದಿವಸಗಳಲ್ಲಿ ನಾವು ಕೂಡ ಕರ್ನಾಟಕ ರಾಜ್ಯದಲ್ಲಿ 40 ವರ್ಷಗಳ ಕಾಲ -ಜನರ ಮಧ್ಯದಲ್ಲಿ ಕೆಲಸವನ್ನು ಮಾಡಿದ್ದೇವೆ, because it requires a political credibility ನಾವು ಏನು ಹೇಳುತ್ತೇವೆ, ಅದು ಅನುಷ್ಟಾನಕ್ಕೆ ಬರಬೇಕು ಅನುಷ್ಟಾನಕ್ಕೆ ತರುವುದಕ್ಕೆ ಆಗದೇಹೋದರೆ ಬಹಳ ದಿವಸಗಳ ಕಾಲ ಉಳಿಯುವುದಕ್ಕೆ ಸಾಧ್ಯವಿಲ್ಲ ತಾವು ಕೂಡ ರಾಜಕೀಯ ಜೀವನದಲ್ಲಿ ಸಾಕಷ್ಟು ಏರುಪೇರುಗಳನ್ನು ನೋಡಿದ್ದೀರಿ, ಯಾವ ಒಂದು ideology ಮೇಲೆ ಲೋಹಿಯಾ ಅವರ ideology ಮೇಲೆ ಬಂದು ಕೊನೆಗೆ ತಾವು ಏನಪ್ಪಾ ಅಂದರೆ ಬಲೂಲಕರ್ ಅವರ ideologyಗೆ ಇವತ್ತು ಹೋಗಿ ಸಿಕ್ಕಿಬಿದ್ದಿದ್ದೀರಿ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ, but they are very defendable But ಹೊಸತು ಏನೆಂದರೆ, ಅದು ನಿಮ್ಮ ಭಾಷೆಯಾಗಲಿಲ್ಲ ಇವತ್ತು ನಾವು ಏನೆಂದರೆ, in politics, we must have a commitment In politics ideological basis ಮೇಲೆ constitute ಆಗಬೇಕಾದರೆ ಬಹಳ ದಿವಸಗಳ ಕಾಲ ಉಳಿಯುತ್ತದೆ ಜನರು ಕೂಡ್ಡ ನೆನೆಯುತ್ತಾರೆ, ಅದಕ್ಕೆ ಇವತ್ತಿನದಿವಸ ಕಂದಾಯ ಮಂತ್ರಿಗಳಿಂದ ಸ್ಪಷ್ಟವಾದ ಉತ್ತರವನ್ನು ನಮ್ಮ ಎಲ್ಲಾ ನಾಯಕರುಗಳು ಮಾತನಾಡಿದ ಮೇಲೆ ಕೊಡುತ್ತಾರೆ ಮತ್ತೆ ಆದಾದ ಮೇಲೆ supplementaryಯನ್ನು ಕೇಳುವಂತಹ ಪ್ರಯತ್ನವನ್ನು ನಾವು ಮಾಡುತ್ತೇವೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ (ಹಳಿಯಾಳ) ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ ಈಗಾಗಲೇ ಮಾನ್ಯ ಗೃಹ ಸಚಿವರು ಹೇಳಿದಹಾಗೆ ಈ ವರ್ಷ ಏನು ಬರಗಾಲವಿದೆ ಇಂತಹ ಭೀಕರವಾದ ಬರಗಾಲ ಯಾವತ್ತು ಬಂದಿಲ್ಲ ದುರ್ದೈವದಿಂದ ನಾವು ಬಹಳ ಹೆಮ್ಮೆಯಿಂದ ಕರ್ನಾಟಕ ರಾಜ್ಯದ ಸುವರ್ಣ ವರ್ಷವನ್ನು ಆಚರಿಸುವಾಗ

ಇಂತಹ ಭೀಕರವಾದ ಬರಗಾಲ ಬಂದಾಗ ರಾಜ್ಯ ಸರ್ಕಾರವು ಬಹಳ ಚುರುಕಾಗಿರಬೇಕಾಗಿತ್ತು ಇವತ್ತು ನಮ್ಮ ರೈತರು ಮತ್ತು ಬಡವರು, ಕೂಲಿಕಾರರು ಇದರ ಬಗ್ಗೆ ಚಿಂತನ ರಾಜ್ಯ ಸರ್ಕಾರಕ್ಕೆ ಇರಬೇಕಾಗಿತ್ತು ಅದು ಇದುವರೆವಿಗೂ ನಡೆದಿಲ್ಲ ಇವತ್ತು ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, "Farmer's suicide hatavo" ಇದು ಹೆಚ್‌ಡಿಕೆ ಗುರು ಮಂತ್ರ, ಸಂತೋಷ ಹೊಸ ಕೃಷಿನೀತಿಯನ್ನು ತಂದರು, ಇದು ಕಾರ್ಯಪಾಲನೆ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದಾರೆ ನಮ್ಮ ನಾಯಕರು ಹೇಳಿದಹಾಗೆ ಕೇಂದ್ರ ಸರ್ಕಾರವು ಏನು ಹಣವನ್ನು ಬಿಡುಗಡೆ ಮಾಡಿದೆ, ಆ ಹಣವನ್ನು ಇನ್ನು ಬಿಡುಗಡೆ ಮಾಡಿಲ್ಲ ರಾಜ್ಯ ಸರ್ಕಾರ ತಮ್ಮ ಷೇರನ್ನು ಬಿಡುಗಡೆ ಮಾಡುವುದು ಅದನ್ನು ವಿಲೇ ಮಾಡಿ ಕೇಂದ್ರ ಸರ್ಕಾರದಿಂದ ಬಂದಿರುವಂತಹ ಹಣವನ್ನು ಇನ್ನು ಬಿಡುಗಡೆ ಮಾಡಿರುವುದಿಲ್ಲ ಆದರೆ ನಿಮಗೆ ರೈತರ ಬಗ್ಗೆ ಎಷ್ಟು ,ಕಾಳಜಿ ಇದೆ, ಅವರ ಬಗ್ಗೆ ಎಷ್ಟು ಚಿಂತನೆ ಇದೆ ಎಂಬುದು ಇದರಿಂದಾಗಿ ಸ್ಪಷ್ಟವಾಗಿ ಕಾಣುತ್ತದೆ ಈಗಾಗಲೇ ಕೇಂದ್ರ ಸರ್ಕಾರ 1ನೇ ಜುಲೈ 2006 ಈ ಬರಗಾಲ ಬಂದಿರುವುದು ಹಾಸನ, ಚಿತ್ರದುರ್ಗ, ಚಿಕ್ಕಮಗಳೂರು, ಕೊಡಗು ಮತ್ತು ಶಿವಮೊಗ್ಗ ಈ ಜಿಲ್ಲೆಯಲ್ಲಿ as on 1st july 2006 ಯಾವ ಸಾಲಗಳು ಓ ಬಿ ಯಾಯಿತು ಅದಕ್ಕೆ ಬಡ್ಡಿಯನ್ನು ಮನ್ನಾ ಮಾಡುವಂತೆ ನಿರ್ಣಯ ಮಾಡಿದೆ ಅದನ್ನು ರಾಜ್ಯ ಸರ್ಕಾರ ಸ್ವಾಗತ ಮಾಡಬೇಕು ಕೇಂದ್ರ ಸರ್ಕಾರವು ಒಂದು ಪ್ಯಾಕೇಜ್‌ನ್ನು ಕೊಟ್ಟಿದೆ ಬೀದರ್‌ನಲ್ಲಿ ಯಾವ ಪ್ರಕಾರವಾಗಿ ಕೊಟ್ಟರು, ಆ ಪ್ರಕಾರವಾಗಿ ಈಗ ಜಿಲ್ಲೆಗಳಿಗೂ ಸಹ ಕೊಟ್ಟಿದೆ ಅದರ ಉಪಯೋಗವೇನು ಆಗುತ್ತಿದೆ ಆ ಪ್ಯಾಕೇಜ್‌ನ್ನು ಯಾವ ಪ್ರಕಾರವಾಗಿ ನೀವು implement ಮಾಡಿದ್ದೀರಿ, ಇದು ನಮಗೆ ನೀವು ಕೊಡುವ ಉತ್ತರದಲ್ಲಿ ಗೊತ್ತಾಗಬೇಕು ಈ drought haunts the State ಎಂದು ಒಂದು ವಿಚಾರ ಡೆಕ್ಕನ್ ಹೆರಾಲ್ಡ್‌ನಲ್ಲಿ ಬಂದಿದ್ದು, ನಾನು ಕಂದಾಯ ಹಾಗೂ ಕೃಷಿ ಸಚಿವರ ಗಮನಕ್ಕೆ ತರುತ್ತಿದ್ದೇನೆ 2001–2006ರ ತನಕ year wise data damage crops ಇದೆ 2001ನೇ ಇಸವಿಯಲ್ಲಿ 28 ಲಕ್ಷ ಹೆಕ್ಟೇರ್ damage ಆಯಿತು 2004 ರಲ್ಲಿ 14 ಲಕ್ಷ ಆಯಿತು 2005ರಲ್ಲಿ 12 ಲಕ್ಷ ಹೆಕ್ಟರ್ ಅಯಿತು ಈ ವರ್ಷದ ಬಗ್ಗೆ ತಮಗೆ ಗೊತ್ತಿದೆಯೋ ಅಥವಾ ಗೊತ್ತಿಲ್ಲ, 29 ಲಕ್ಷ ಹೆಕ್ಟರ್ ಭೂಮಿಯಲ್ಲಿ ಕೃಷಿ ಉತ್ಪಾದನೆಗೆ effect ಆಗಿದೆ ಆದರೆ ರೈತರು ಎಷ್ಟು ಕಷ್ಟದಲ್ಲಿದ್ದಾರಂಬ ಬಗ್ಗೆ ತಾವು ವಿಚಾರ ಮಾಡಬೇಕು ರೈತರು ಇಷ್ಟೊಂದು ಕಷ್ಟದಲ್ಲಿರುವಾಗ ನಮ್ಮ

ಸರ್ಕಾರವು ಯಾವ ತರಹದ ನೆರವನ್ನು ಕೊಡುವುದರ ಬಗ್ಗೆ ಧಾವಿಸಿದೆ ಇದರ ಬಗ್ಗೆ ಮಾನ್ಯ ಕಂದಾಯ ಹಾಗೂ ಕೃಷಿ ಸಚಿವರು ಹೇಳಬೇಕಾಗುತ್ತದೆ ಕೇವಲ ನಾವು ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳುವುದಲ್ಲ ನೀವು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ, ಬಿಜೆಪಿಯವರು ಕರಾವಳಿ ಭಾಗದಿಂದ ಬಹಳ ಜನ ಆರಿಸಿ ಬಂದಿದ್ದೀರಿ, ಕರಾವಳಿ ಭಾಗದಲ್ಲೂ ಬಹಳ ಜನರು ಓಟು ಕೊಟ್ಟಿದ್ದಾರೆ ದಿನಾಂಕ 29–01–2007ರಲ್ಲಿ 17 ಜಿಲ್ಲೆಗಳಿಗೆ 100 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಇನ್ನು 10 ಜಿಲ್ಲೆಗಳವರು ಏನು ಪಾಪ ಮಾಡಿದ್ದಾರೆ ಅಲ್ಲಿ ಅತಿವೃಷ್ಟಿಯಾಗಿಲ್ಲವೇ? ಅಲ್ಲಿ ತೊಂದರೆ ಇಲ್ಲವೆ, ನೀವೇ ಮೊನ್ನೆ ದಿನ ಅಲ್ಲಿಗೆ ಬಂದು ಹೇಳಿದ್ದೀರಿ, ಅಲ್ಲಿ ಏನು ರಸ್ತೆಗಳು ಹಾಳಾಗಿದೆ, ಆ ರಸ್ತೆಗಳನ್ನು ರಿಪೇರಿ ಮಾಡುವ ಬಗ್ಗೆ ಹಣವನ್ನು ಬಿಡುಗಡೆ ಮಾಡಬೇಕಲ್ಲವೆ? ಏಕೆ ಕೊಟ್ಟಿಲ್ಲವೆಂಬುದರ ಬಗ್ಗೆ ನಮಗೆ ಸ್ಪಷ್ಟವಾದ ಉತ್ತರ ಬೇಕಾಗಿದೆ ದಕ್ಷಿಣ ಕನ್ನಡ,ಉಡುಪಿ, ಚಿಕ್ಕಮಗಳೂರು, ಉತ್ತರಕನ್ನಡ ಜಿಲ್ಲೆ, ಕೊಡಗು ಇನ್ನು ಹಲವಾರು ಅತಿವೃಷ್ಟಿಯಾದ ಜಿಲ್ಲೆಗಳಿಗೆ ನೀವು ಹಣವನ್ನು ಬಿಡುಗಡೆ ಮಾಡಿರುವುದಿಲ್ಲ, ಏತಕ್ಕಾಗಿ ಮಾಡಲಿಲ್ಲ? ಅಲ್ಲಿ crop damage ಆಗಿದೆ ನೀವು ಕೊಟ್ಟ ಪರಿಹಾರವೇನು ಈಗಾಗಲೇ ನಾನು ಇದರ ಬಗ್ಗೆ ಹೇಳಿದ್ದೇನೆ ಅರಣ್ಯ ಭೂಮಿಗೆ ತಾವು ಪರಿಹಾರವನ್ನು ಕೊಟ್ಟಿರುವುದಿಲ್ಲ ಇದಕ್ಕಾಗಿ ಕೇಂದ್ರ ಸರ್ಕಾರದವರು ಹಣವನ್ನು ಕೊಟ್ಟಿದ್ದಾರೆ ರಾಜ್ಯ ಸರ್ಕಾರದವರು ಹಣವನ್ನು ಕೊಡುವುದರ ಬಗ್ಗೆ ಆದೇಶವಾಗಿದೆ ಕಳೆದ 3–4 ವರ್ಷಗಳಿಂದ ಅರಣ್ಯ ಇಲಾಖೆಯ ಫೈಲ್ ಪೆಂಡಿಂಗ್ ಇದೆ Just land disqualify ಆಗಿಲ್ಲ ಅದನ್ನು ನಾವು ಏನು ಒಪ್ಪಿಕೊಂಡಿದ್ದೇವೆ ಅವರಿಗೆ ಜಮೀನು ಕೊಡುವುದರ ಬಗ್ಗೆ because entry change ಅಗಿಲ್ಲವೆಂದು ಹೇಳಿ ಈಗ ನಾವು ಅವರಿಗೆ ಶಿಕ್ಷೆಯನ್ನು ಕೊಡುವುದಕ್ಕಾಗುತ್ತದೆಯೇ? ಹಾಗಾದರೆ ಅದರ ಬಗ್ಗೆ ನಿರ್ಣಯವನ್ನು ಮಾಡಬೇಕಾಗುತ್ತದೆ ಸರ್ಕಾರ ಆದೇಶವಿದ್ದು ಅವರ ಜಮೀನಿಗೆ ಕೊಡಬೇಕೆಂದಾಗ ಅದಕ್ಕೆ ಪರಿಹಾರ ಸಿಗುವಂತಹ ವ್ಯವಸ್ಥೆಯಾಗಬೇಕಾಗುತ್ತದೆ ಇವತ್ತು ಕೃಷಿಯ ಸಲುವಾಗಿ ನಮ್ಮ normal rate ಮಾನ್ಯ ಕೃಷಿ ಸಚಿವರೆ, 144 MM rates October ನಲ್ಲಿ normal rate ಆಗಬೇಕಾಗಿತ್ತು 99MM ಆಗಿದೆ ಅದರಿಂದಾಗಿ 45% deficit ಆಗಿದೆ ಇದನ್ನು ತಾವು ತಿಳಿದುಕೊಳ್ಳಬೇಕು ಇವತ್ತು ಅವರು ಹೇಳುತ್ತಾರೆ ನೋಡಿ Sales Director V S Prakash ಹೇಳುತ್ತಾರೆ October rainfall has been worst in

the last 36 years 36 ವರ್ಷದಲ್ಲಿ ಅಷ್ಟು ಮಳೆ October 2006ನೇ ಇಸವಿಯಲ್ಲಿ ಆಗಿದೆ ಇದನ್ನು ಯಾರು ಹೇಳುತ್ತಾರೆ It has been badly affected the crops ಎಂದು Crop Monitoring Cell Director V S Prakashರವರು ಹೇಳುತ್ತಾರೆ ನೀವು ಏನು ಮಾಡುತ್ತಿದ್ದೀರಿ? ಇದರ ಬಗ್ಗೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ರೈತರು ಕಷ್ಟದಲ್ಲಿರುವಾಗ crop affect ಆದಾಗ, ಉತ್ಪಾದನೆಯಲ್ಲಿ affect ಆದಾಗ ಏನು contingency plan ನಿಮ್ಮದು? ಕೃಷಿ ಇಲಾಖೆಗೆ contingency plan ಇರುತ್ತದೆ 29 ಲಕ್ಷ ಹೆಕ್ಟೇರ್ ಜಮೀನಿನಲ್ಲಿ ರಬಿಯಲ್ಲಿ ಏರಡೂವರೆ ಲಕ್ಷ ಹೆಕ್ಟೇರ್ ಜಮೀನು ಹಾಳಾಗಿದೆ ಕೃಷಿ ಇಲಾಖೆಯವರು ತಕ್ಷಣ ಹೀಗೆ ಜಮೀನು ಮಳೆಯಾಗುಚವ ಅಭಾವದಿಂದ ಬಂಜರು ಬೀಳಬಹುದು ಅಥವಾ ಬೀಜವನ್ನು Sale ಮಾಡುವುದು ಉತ್ಪಾದಕರು ಇರುವಾಗ ನಿಮ್ಮ ಕಡೆ ಪರ್ಯಾಯವಾಗಿ contingency plan ಇರುತ್ತದೆ ಏನು contingency plan ಮಾಡಿದ್ದೀರಿ? ಯಾವ ಜಿಲ್ಲೆಯಲ್ಲಿ ಯಾವ ತರಹದ ಬೀಜದ ಬಗ್ಗೆ contingency plan ಮಾಡಿ ಕೊಟ್ಟಿದ್ದೀರಿ? ಅದು ನಮಗೆ ಗೊತ್ತಾಗಬೇಕಲ್ಲವೆ, ಅದರ ಬಗ್ಗೆ ನಮಗೆ ಕಳುಹಿಸುವುದಿಲ್ಲ ಇದರ ಬಗ್ಗೆ ನಾವು ಕೃಷಿ ಇಲಾಖೆಯವರು ಇದರ ಬಗ್ಗೆ ಹೇಳಬೇಕಾಗುತ್ತದೆ ಬೆಳೆಯು ಹಾಳಾದಾಗ ಯಾವ ಯಾವ ಸೀಸನ್‌ನಲ್ಲಿ ಬೆಳೆಯು ಹಾಳಾಗಿದೆ, ಅಲ್ಲಲ್ಲಿ ಪರಿಹಾರವನ್ನು ಕೊಡಬೇಕು ಏನು ನಿಮ್ಮ contingency plan ಇದು ಗೊತ್ತಿಲ್ಲ ಅತಿವೃಷ್ಟಿಯಿಂದಾಗಿ ಹತ್ತಿ ಬೆಳೆ, ಜೋಳ ಎಲ್ಲವೂ ಹಾಳಾಯಿತು, ಏನು contingency plan ಇಲ್ಲ ಯಾವ ಸೀಡ್ಸ್ ಸಪ್ಲೈ ಆಗಿಲ್ಲ ಹಾಗಾದರೆ ಸರ್ಕಾರ ಇವತ್ತು ಬೆಳೆಯು ಹಾಳಾದಾಗ ರೈತರಿಗೆ ಪರ್ಯಾಯ ಬೆಳೆಯನ್ನು ಬೆಳೆಸುವ ಬಗ್ಗೆ ಬೀಜವನ್ನು ಕೊಡುವುದು, concision rateಗೆ ಕೊಡಬೇಕು, ಯಾವ ತರಹದ ಬೀಜವನ್ನು ಕೊಟ್ಟಿದ್ದೀರಿ ಅದರಿಂದ ಉತ್ಪಾದನೆ ಏನಾಗಿದೆ ಇದರ ಬಗ್ಗೆ ತಮ್ಮ ಕಡೆಯಿಂದ ಮಾಹಿತಿ ಇಲ್ಲ ಇವತ್ತು ಸರ್ಕಾರ ಎಲ್ಲಾ ರೀತಿಯಿಂದ ವಿಫಲವಾಗಿದೆ ಅತಿವೃಷ್ಟಿಯಾಗಲಿ, ಅನಾವೃಷ್ಟಿಯಾಗಲಿ, ಹೀಗೆ ಆದಾಗ ಇದು ಪ್ರತಿವರ್ಷವು ಆಗುತ್ತದೆ ನಾವು ಇದರ ಬಗ್ಗೆ ಮಾತನಾಡುತ್ತೇವೆ ಇದರ ಬಗ್ಗೆ ನೀವು ಸಹ ಮಾತನಾಡುತ್ತೀರಿ ಇದನ್ನು ಖಾಯಂ ಆಗಿ ಸರಿ ಮಾಡಬೇಕು ಒಂದು permanent messuresನ್ನು ತೆಗೆದುಕೊಳ್ಳಬೇಕಾಗುತ್ತದೆ ಯಾವ ಪ್ರಕಾರ ಇಂತಹ ಪರಿಸ್ಥಿತಿಯಾದಾಗ, ಯಾವ

ತರಹದ cropನ್ನು ನಾವು ಕೊಡಬೇಕು ಟಿ ಎಸ್ ಪಿ ಲೋನ್ ಹಣ ಬಿಡುಗಡೆ ಮಾಡಿ ಈ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುವುದಿಲ್ಲ ಹಾಗೆಯೇ, ಈ ಭಾಗದಲ್ಲಿ ಎಲ್ಲೆಲ್ಲಿ ನೀರಾವರಿ ಮಾಡಲಿಕ್ಕೆ ಸಾಧ್ಯವಿಲ್ಲ ಒಣ ಬೇಸಾಯ ಯೋಜನೆಗಳನ್ನು ಹೆಚ್ಚು ಜಾರಿಗೆ ತರಲಿಕ್ಕೆ ಪ್ರಯತ್ನ ಮಾಡಬೇಕು ಸಣ್ಣ ನೀರಾವರಿಗೆ ಹೆಚ್ಚು ಪ್ರಾಮುಖ್ಯತೆ ಕೊಡಬೇಕು ಹಾಗಾಗಿ ಈ ವಿಚಾರಗಳಲ್ಲಿ ಕೇವಲ temporary ಆಗಿ ಅದಕ್ಕೆ ಒಂದು ಮೆಡಿಸಿನ್ ಕೊಟ್ಟು ಬಿಡುವುದಲ್ಲ ಅದಕ್ಕೆ ಒಂದು ಖಾಯಂ ಸ್ವರೂಪದ ಯೋಜನೆಯನ್ನು ಸರ್ಕಾರ ಅಸ್ತಿತ್ವಪಡಿಸಬೇಕಾಗುತ್ತದೆ ಆ ದಿಕ್ಕಿನಲ್ಲಿ ನಿಮ್ಮ ಚಿಂತನೆ ಏನು? ಇನ್ನೂ ಮುಂದೆ ಇಂತಹ ಅನಾಹುತಗಳು ಆದಾಗ ಅಂಧ ಅತೀವೃಷ್ಟಿ ಅನಾವೃಷ್ಟಿ ಆದಾಗ ನೀವು ಏನು ಮಾಡುತ್ತೀರಿ? ಇದರ ಬಗ್ಗೆ ನಿಮಗೆ ಚಿಂತನೆ ಇದ್ದರೆ ಸರಿಯಾಗಿ ಸ್ಪಷ್ಟೀಕರಣವನ್ನು ನಿಮ್ಮ ಉತ್ತರದಲ್ಲಿ ನೀವು ಕೊಡಬೇಕು ಶ್ರೀ ಜಗದೀಶ್ ಶೆಟ್ಟರ್ ಒಬ್ಬ ಜವಾಬ್ದಾರಿ ಸ್ನೇಹಿತರು, ಕಂದಾಯ ಮಂತ್ರಿಗಳಾಗಿದ್ದೀರಿ ಆಗ ವಿರೋಧ ಪಕ್ಷದ ನಾಯಕರಾಗಿ ಈ ವಿಚಾರವನ್ನು ನೀವು ಪ್ರಸ್ತಾಪ ಮಾಡಿದಾಗ ಹಾಗು ಇವತ್ತು ಇದರ ಬಗ್ಗೆ ಚಿಂತನೆ ಮಾಡುತ್ತಿರಬಹುದೆಂದು ನಾನು ಭಾವಿಸುತ್ತೇನೆ along with the Agricultural Minister ಹಾಗಾದರೆ ನಿಮ್ಮ ಚಿಂತನೆ ಏನು? ಈ ಸಮಸ್ಯೆ ಮುಂದಿನ ವರ್ಷ ಬರುವುದಿಲ್ಲವೆನ್ನುವ ಹಾಗಿಲ್ಲ ಬರಬಾರದೆಂದು ದೇವರಲ್ಲಿ ಪ್ರಾರ್ಥನೆ ಮಾಡುವುದು ಆದರೂ ಪ್ರತಿವರ್ಷ ಈ ಸಮಸ್ಯೆ ಬರುತ್ತದೆ ಹಾಗಾಗಿ ನಿಮ್ಮ ಚಿಂತನೆ ಏನು? ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ ಮುಖ್ಯವಾಗಿ ಇವರು ಹೇಳುವುದೇನೆಂದರೆ, ನಮ್ಮ ಕರ್ನಾಟಕದಲ್ಲಿ ಒಳ್ಳೆಯ ಕಲ್ಪಿವಬಲ್ ಏರಿಯಾ ಇದೆ ಅಲ್ಲಿ 41% ಏರಿಯಾ ಎಫೆಕ್ಟ್ ಆಗಿದೆ ಕೃಷಿ ಸಚಿವರು ಇದೆಲ್ಲಾ ನಿಮಗೆ ಗೊತ್ತಿದ್ದಾಗ ಇದರ ಬಗ್ಗೆ ಒಂದು ವಾರ, ಹದಿನೈದು ದಿವಸಗಳಲ್ಲಿ ಕೆಲಸ ಆಗಬೇಕಾಗಿತ್ತು ಆದರೆ ಹಾಗಾಗಿಲ್ಲ, ನೀವು ಇನ್ನೂ ಯುವಕರಿದ್ದೀರಿ ತಮಗೆ ರೈತರ ಬಗ್ಗೆ ಚಿಂತನೆ ಇದೆ, ನಿಮ್ಮ ಕಾಲದಲ್ಲಿ ಅದು ಕಾಣಿಸಬೇಕಾಗಿತ್ತು ಆ ತರಹದ ಚಿಂತನೆ ನಿಮ್ಮ ಮಾತಿನಲ್ಲಿ ಕಾಣಿಸುತ್ತಿಲ್ಲ ಸರ್ಕಾರ ಆ ದಿಕ್ಕಿನಲ್ಲಿ ಕೆಲಸ ಮಾಡಿದ್ದು ನಮಗೆ ಕಾಣಿಸುತ್ತಿಲ್ಲ ಮುಂಜಾನೆ, ಸಂಜೆ ಹಳ್ಳಿಯಲ್ಲಿ ಯಾರ ಮನೆಯಲ್ಲೂ ಉಳಿಯಬಾರದೆಂದು ನಾನು ಹೇಳುವುದಿಲ್ಲ, ಯಾರ ಮನೆಗಾದರೂ ಹೋಗಿ ಉಳಿಯಲಿ, ಎಲ್ಲಿಗಾದರೂ ಹೋಗಿ ಉಳಿಯಲಿ, ಅದರ ಬಗ್ಗೆ ನಾನು ಏನೂ ಹೇಳುವುದಿಲ್ಲ _ ಇದರಿಂದ ಸಮಸ್ಯೆ ಬಗೆಹರಿಸಲಿಕ್ಕೆ ಸಾಧ್ಯವಿಲ್ಲ ಅದು ಅವರ

ಹೊಸ ಕಾರ್ಯಕ್ರಮ ಆಗಿರಬಹುದು, ಸಂತೋಷ ಹಾಗಾಗಿ ಇದರ ಬಗ್ಗೆ ನಾವು ವಾದಕ್ಕೆ ಹೋಗುವುದಿಲ್ಲ ಅದು ಒಂದು ಕಾರ್ಯಕ್ರಮ ಇನ್ನು ಹತ್ತು ಕಡೆ ಹೋಗಿ ಮಲಗಲಿ, ಹೆಚ್ ಐ ವಿ, ಕ್ಯಾನ್ಸರ್ ರೋಗಿಗಳ ಮನೆಗಳಲ್ಲಿ ಹೋಗಿ ಮಲಗಲಿ, ಏನು ತೊಂದರೆಯಿಲ್ಲ ಅದು ನಿಮ್ಮ ವಿಚಾರಧಾರೆ, ಅದಕ್ಕೆ ನಾನು ಏನು ಹೇಳುವುದಿಲ್ಲ ಆದರೆ ನೀವು ಮುಂಜಾನೆಯಿಂದ ಸಂಜೆಯ ತನಕ 10 ಬಾರಿ ನಿಮ್ಮ ಭಾಷಣದಲ್ಲಿ ಹೇಳಿದ್ದೀರಿ ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದಾಗ, ಈಶ್ವರಪ್ಪನವರು, ಜಗದೀಶ್‌ಶೆಟ್ಟರ್‌ರವರು ಏನೇನು ಮಾತನಾಡಿದ್ದರು, ಪ್ರತಿ ಬಾರಿ ರೈತರು, ರೈತರು ಎಂದು ಹೇಳಿ ರೈತರ ಸಾಲ ಮನ್ನಾ ಮಾಡಿ, ಮತ್ತೊಂದು ಮಾಡಿ ವಾಕ್‌ಔಟ್, ಧರಣಿ, ಗಲಭೆ ಮಾಡುತ್ತಿದ್ದರು, ಇವತ್ತು ರೈತರು ಬಗ್ಗೆ ಕಾಳಜಿ ಎಲ್ಲಿ ಹೋಗಿದೆ, ಏನಾಗಿದೆ, ಇವತ್ತು ಅಧಿಕಾರ ಅಷ್ಟೇ ನಿಮ್ಮ ತಲೆಗೆ ಹೋಗಿದೆ ರೈತರನ್ನು ಮರೆತಿರಿ, ಕರ್ನಾಟಕವನ್ನು ಮರೆತಿರಿ, ಸಾಮಾನ್ಯ ಜನರನ್ನು ಮರೆತಿರಿ, ನಿಮ್ಮ ಅಧಿಕಾರ ಏನು ಅದರ ಅವಶ್ಯಕತೆ ಏನು ಇದೆ ಈ ಬಗ್ಗೆ ನಾವೇನು ಹೊಸದಾಗಿ ಹೇಳುತ್ತಿಲ್ಲ

ಶ್ರೀ ಕೆ ಎಸ್ ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ತಾವು ನಿಜಕ್ಕೂ ಬಹಳ ಹಿರಿಯ ರಾಜಕಾರಣಿಗಳು, ಅನುಭವಿ ಮಂತ್ರಿಗಳು ಸಹ ಆಗಿದ್ದಿರಿ ನಿಮ್ಮ ಎದೆ ಮುಟ್ಟಿಕೊಂಡು ಹೇಳಿ, ನಿಮ್ಮ ಇಷ್ಟು ವರ್ಷದ ಅಭಿವೃದ್ಧಿಗೂ, ಈ ಸರ್ಕಾರ ಬಂದ ಮೇಲೆ ರೈತರ ಅಭಿವೃದ್ಧಿಗಾಗಿ ನಾವು ಮಾಡಿರುವ ಕಾರ್ಯಕ್ರಮಗಳು ಏನು ಎಂಬ ಬಗ್ಗೆ ನೀವು ನಿಮ್ಮ ಎದೆ ಮುಟ್ಟಿಕೊಂಡು ಹೇಳಿ ನೀವು ಸತ್ಯ ಎಂದು ಹೇಳಿಬಿಟ್ಟರೆ ನೀವು ಹೇಳಿದಂತೆ ನಾನು ಕೇಳುತ್ತೇನೆ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಉತ್ತರ ಕೊಡಬೇಕು ಮೊನ್ನೆ ದಾಂಡೇಲಿಗೆ ಹೋಗಿ ಹೇಳಿ ಬಂದಿದ್ದಾರೆ ಇದೇನು ರಸ್ತೆ, ದೇಶಪಾಂಡೆಯವರು ಇಲ್ಲಿ 25 ವರ್ಷಗಳಿಂದ ಎಂ ಎಲ್ ಎ ಆಗಿದ್ದಾರೆ ಈ ರೀತಿಯ ರಸ್ತೆಯನ್ನು ನಿಮಗೆ ಕೊಟ್ಟಿದ್ದಾರೆಯೇ ಎಂದು ಹೇಳಿ ಬಂದಿದ್ದಾರೆ ರಸ್ತೆ ಮಾಡಿರುವವನು ನಾನಲ್ಲ, ರಸ್ತೆ ಹಾಳಾಗಿರುವುದು ಒಂದೂವರೆ ವರ್ಷದಲ್ಲಿ ಈಗ ಉತ್ತರ ನಿಮಗೆ ಶೆಟ್ಟರು ಕೊಟ್ಟ ಹಾಗೆ ಆಯಿತಲ್ಲ, ರಸ್ತೆ ಸರಿಯಿಲ್ಲವೆಂದು ಎಲ್ಲಿ ಅಭಿವೃದ್ಧಿ ಆಗಿದೆ? ಮಾತುಗಳು ಘೋಷಣೆಗಳು ನಡೆಯುತ್ತಿದೆ ಅವರಿಗೆ ಅನುಭವದ ಕೊರತೆಯೂ ಇರಬಹುದು ಆಡಳಿತ ನಡೆಸುವುದು ಅಷ್ಟು

ಹಗುರವಲ್ಲ ಮಂತ್ರಿಗಳು, ಮುಖ್ಯಮಂತ್ರಿಗಳು ಆಗಿರಬಹುದು ಎಲ್ಲಾ ಆಗಬಹುದು ಆಡಳಿತ ನಡೆಸಬೇಕಾದರೆ ಜನರ ಸಮಸ್ಯೆಗೆ ಸ್ಪಂದಿಸಬೇಕಾಗುತ್ತದೆ ಏನು ಹಣ ಬಿಡುಗಡೆ ಮಾಡುತ್ತೀರಿ, ಅದರ ಬಗ್ಗೆ ಮಾನಿಟರ್ ಮಾಡ ಅದರ ಸದುಪಯೋಗ ಆಗುತ್ತಿದೆಯೆ ಎಂದು ನೋಡಬೇಕಾಗುತ್ತದೆ ಎಷ್ಟು ಜನ ಮಂತ್ರಿಗಳು ಅದರ ಬಗ್ಗೆ ನೋಡುತ್ತಿದ್ದೀರಿ, ಎಷ್ಟು ಜನ ಜಿಲ್ಲಾ ಕೇಂದ್ರಗಳಿಗೆ ಭೇಟಿ ಕೊಟ್ಟಿರಿ, ಎಷ್ಟು ಸಭೆಗಳು ಆಗಿವೆ ಎಂಬ ಬಗ್ಗೆ ನಾವೇನೂ ನೋಡಿಲ್ಲ ಹಾಗಾಗಿ ನಾನು ತಮ್ಮನ್ನು ಟೀಕೆ ಮಾಡುತ್ತಿಲ್ಲ ತಮ್ಮನ್ನು ಎಚ್ಚರಿಸುತ್ತಿದ್ದೇನೆ ನೀವು ಮಾಡಿದ್ದು ಸರಿಯಲ್ಲ ನಿಮಗೆ ಅವಕಾಶವನ್ನು ದೇವರು ಕೊಟ್ಟಿದ್ದಾನೆ ಒಳ್ಳೆಯ ಕೆಲಸ ಮಾಡಿ, ಯಾರು ಬೇಡವೆಂದು ನಿಮಗೆ ಹೇಳುತ್ತಾರೆ ಆದರೆ ನೀವು ಏನೂ ಮಾಡದೆ ಇವತ್ತು ಮುಂಜಾನೆಯಿಂದ ಸಂಜೆ ತನಕ ಹಿಂದು ಜನರ ಸಮ್ಮೇಳನ ಮಾಡುವುದರಲ್ಲಿ ತಲ್ಲೀನರಾಗಿದ್ದೀರಿ ಅದನ್ನು ಏಕೆ ಮಾಡುತ್ತೀರೆಂದು ನಾನು ಕೇಳುವುದಿಲ್ಲ ಅದನ್ನು ಬಿಟ್ಟು ಬೇರೆ ಏನು ಕಾರ್ಯಕ್ರಮ ಇಲ್ಲ ಇವತ್ತು ನೀವು ಇದರ ಬಗ್ಗೆ ಸಾಕಷ್ಟು ಚಿಂತನೆ ಮಾಡಿ ಇದರ ಬಗ್ಗೆ ಸರ್ಕಾರದಿಂದ ಯಾವುದಾದರೊಂದು ಕಾರ್ಯಕ್ರಮ ಹಾಕಿಕೊಂಡು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು ಆದರೆ ಆ ರೀತಿಯ ಕ್ರಮ ತೆಗೆದುಕೊಂಡಿಲ್ಲ ನನ್ನಲ್ಲಿರುವ ಮಾಹಿತಿಯ ಪ್ರಕಾರ ಇವತ್ತು ಕೇಂದ್ರ ಸರ್ಕಾರ 180 ಲಕ್ಷ ಮೆಟ್ರಿಕ್ ಟನ್ಸ್ ಜೂನ್ 2006ರಲ್ಲಿ 50,000 ಮೆಟ್ರಿಕ್ ಟನ್ಸ್ ಡಿಸೆಂಬರ್ 6ರಲ್ಲಿ ಒಟ್ಟು 230 ಲಕ್ಷ ಮೆಟ್ರಿಕ್ ಟನ್ಸ್ ಫುಡ್ ಗ್ರೇನ್ಸ್ ರಿಲೀಸ್ ಮಾಡಿದ್ದಾರೆ ಒಂದು ಕಿಲೋಗೆ 6 25 ರೂ ಗಳಂತೆ 145 ಕೋಟಿ ರೂ ಗಳು, in addition ಕೇಂದ್ರ ಸರ್ಕಾರ ನಿಮಗೆ ಕೊಟ್ಟಿರುವ 250 ಕೋಟಿ ರೂ ಗಳ ಹೊರತಾಗಿ 145 ಕೋಟಿ ರೂಪಾಯಿಗಷ್ಟು ಫುಡ್ ಗ್ರೇನ್ಸ್ ಕೊಟ್ಟಿದ್ದಾರೆ, ಆ ಫುಡ್ ಗ್ರೇನ್ಸ್ ಎಲ್ಲಿದೆ, ಯಾವ್ಯಾವ ತಾಲ್ಲೂಕಿಗೆ ಎಷ್ಟೆಷ್ಟು ರಿಲೀಸ್ ಮಾಡಿದ್ದೀರಿ? ಎಷ್ಟು employment generate ಆಗಿದೆ ಎಷ್ಟು ಜನರಿಗೆ ಉದ್ಯೋಗಾವಕಾಶ ಲಭಿಸಿದೆ ಎಂಬ ಬಗ್ಗೆ ಮಾಹಿತಿ ಇರಬೇಕಲ್ಲವೇ? ಮಾನ್ಯ ಮಲ್ಲಿಕಾರ್ಜುನ್ ಖರ್ಗೆಯವರು ಕ್ಯಾಬಿನೆಟ್ ಸಮಿತಿಯ ಛೇರ್ಮನ್ ಆಗಿದ್ದಾಗ ಪ್ರತಿ ಜಿಲ್ಲೆಗೂ ಹೋಗುತ್ತಿದ್ದರು ಪ್ರತಿ ಜಿಲ್ಲಯಲ್ಲಿಯೂ ಮಾನಿಟರಿಂಗ್ ನಡೆಯುತ್ತಿತ್ತು ಶಾಸಕರು, ಜನ ಪ್ರತಿನಿಧಿಗಳನ್ನು ಕರೆಸಿ ಚರ್ಚೆ ಮಾಡುತ್ತಿದ್ದರು ರೈತರ ಜೊತೆ ಚರ್ಚೆ ಮಾಡುತ್ತಿದ್ದರು ನೀವ್ಯಾಕೆ ಹಾಗೆ ಮಾಡಬಾರದು ನಮಗೆ ಆ ಬಗ್ಗೆ ಮಾಹಿತಿ ದೊರೆತಿಲ್ಲ ಟೀಕೆ ಮಾಡಬೇಕೆಂದು ನಾವು ಟೀಕೆ ಮಾಡುತ್ತಿಲ್ಲ

5.30 P M

ಹಾಗಾಗಿ ಇವತ್ತು ಮುಖ್ಯವಾಗಿ ಸರ್ಕಾರಕ್ಕೆ ರೈತರ ಬಗ್ಗೆ ಬಡವರ, ಕೂಲಿಕಾರರ ಬಗ್ಗೆ ನಿಜವಾಗಿಯೂ ಚಿಂತನೆ ಇದ್ದರೆ ಅವರು ನಿರ್ದಿಷ್ಟವಾದ ಕಾರ್ಯಕ್ರಮ ಹಾಕಬೇಕು, ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ಇದರ ಬಗ್ಗೆ ಸರಿಯಾದ ಮಾಹಿತಿ ಸದನಕ್ಕೆ ಕೊಡಬೇಕು ಮತ್ತು ಇನ್ನು ಮುಂದೆ ಇಂತಹ ಅನಾಹುತ ಆಗದಂತೆ ಖಾಯಂ ಸ್ವರೂಪದ ಕೆಲವು ಯೋಜನೆಗಳನ್ನು ಅವರು ಜಾರಿಗೆ ತರಬೇಕೆಂದು ತಮ್ಮ ಮುಖಾಂತರ ಒತ್ತಾಯಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಏನು ಬರದ ಪರಿಸ್ಥಿತಿ ನಿರ್ಮಾಣವಾಗಿದೆ ಇದರ ಬಗ್ಗೆ ಕಾಂಗ್ರೆಸ್ ಪಕ್ಷದವರು ನಿಲುವಳಿ ಸೂಚನೆ ತಂದಿದ್ದರು ಅದನ್ನು ತಾವು ಪರ್ಗಾವಣೆ ಮಾಡಿ ನಮಗೆ ಮಾತನಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ವಂದನೆಗಳನ್ನು ಅರ್ಪಿಸುತ್ತೇನೆ ಮಾನ್ಯ ಅಧ್ಯಕ್ಷರೆ, ರಾಜ್ಯಕ್ಕೆ ಬರ ಹೊಸದೇನೂ ಅಲ್ಲ 1900 ರಿಂದ ಇಲ್ಲಿಯವರಗೆ ಸುಮಾರು 10–12 ಬರಗಳನ್ನು ನಾವು ಎದುರಿಸಿದ್ದೇವೆ ಬಹುಶಃ ಈ ನಾಡಿನ ದೊಡ್ಡ ಸಾಮ್ರಾಟ್ ಶ್ರೀ ಕೃಷ್ಣರಾಜ ಒಡೆಯರು ಸಾಲಗಾರರಾಗಿದ್ದರು ಬರದಲ್ಲಿ ರೈತರ ಸಹಾಯಕ್ಕೆ ಬಂದರು ದುರ್ದೈವ ಇವತ್ತು ನಾವು ಆ feudal ವ್ಯವಸ್ಥೆಯಷ್ಟು ಜನಗಳಿಗೆ ಸಹಕಾರ ಮಾಡಲಿಕ್ಕೆ ಮುಂದೆ ಬರಲಿಲ್ಲವೇನೋ ಎಂಬುದು ನಮ್ಮ ಭಾವನೆ ನಾನು ಈ ಶಾಸನಸಭೆಯಲ್ಲಿ ಮಾತನಾಡುವಾಗ ಹಿಂದೆ ಮಾತನಾಡಿದ್ದೇನೆ ಈ ರಾಜ್ಯಕ್ಕೆ ಎರಡು ರೆಮಿಡಿಯನ್ನು, ಎರಡು ರಿಲೀಫ್ ಅನ್ನು ನಾವು ಯೋಚನೆ ಮಾಡಬೇಕು ಒಂದು ಶಾಶ್ವತವಾಗಿ ಬರದ ಬವಣೆಯನ್ನು ಕಡಿಮೆ ಮಾಡುವುದು ಹೇಗೆ? ಇನ್ನೊಂದು ತ್ವರಿತವಾಗಿ ರೈತರಿಗೆ ಬರುವ ಬರವನ್ನು ನಿಭಾಯಿಸುವುದು ಹೇಗೆ? ಈವರೆಗೆ ರಾಜ್ಯದಲ್ಲಿ drought prone area ವನ್ನು ನಿಜವಾಗಿಯೂ ಒಂದು ಪ್ರಾಜೆಕ್ಟ್ ಮಾಡಿ ನಾವು ಆ ಬವಣೆಯಿಂದ ಆಚೆ ತರಲಿಕ್ಕೆ ಪ್ರಯತ್ನ ಮಾಡಲಿಲ್ಲ ನಿಮಗೆ ಒಂದು ಮಾಹಿತಿಯನ್ನು ಕೊಡಬೇಕಾಗುತ್ತದೆ ಈ ವರ್ಷ ಕರ್ನಾಟಕದಲ್ಲಿ ವ್ಯಾಪಕವಾಗಿ ಮಳೆ ಆಗಲೇ ಇಲ್ಲ ಎಂದು ಹೇಳಲಿಕ್ಕೆ ಆಗುವುದಿಲ್ಲ ನಮ್ಮ rain gaze ಗಳನ್ನು ನೋಡಿದರೆ ಸುಮಾರು ತಾಲ್ಲೂಕುಗಳಲ್ಲಿ average rain ಆಗಿದೆ ಆದರೆ seasonal rain ಆಗಲಿಲ್ಲ ಯಾವ ಕಾಲಕ್ಕೆ ಮಳೆ ಬರಬೇಕಾಗಿತ್ತೋ ಆ ಕಾಲಕ್ಕೆ ಬರಲಿಲ್ಲ ಎರಡನೆಯದು

atmospheric humidity maintain ಆಗಲಿಲ್ಲ ತಾವೇನು , ಭೂಗರ್ಭದಲ್ಲಿರುವ ನೀರನ್ನು ಹೆಚ್ಚು ಬಳಸಿ ತಂಪಿರುವ ಪ್ರದೇಶಗಳಿಗೂ ಕೂಡ ಅತ್ಯಂತ ಹೆಚ್ಚು ಒಣ ವಾತಾವರಣ ಇರಲಿಕ್ಕೆ ನಾವೇನು ಪ್ರಯತ್ನ ಮಾಡಿದೆವು ಅಲ್ಲಿ ಮಳೆ ಬಿದ್ದರೆ ಕಾದಿರುವ ಹೆಂಚಿನ ಮೇಲೆ ನೀರು ಹಾಕಿದಂತೆ ಆಗುತ್ತಿದೆ ಮಳೆ ಬಿದ್ದ ತಕ್ಷಣ evaporate ಅಥವಾ ಅಲ್ಲಿ ಮಳೆಯ ಸಾಂದ್ರತೆಯ ನಮಗೆ ಗೊತ್ತಾಗುತ್ತಿಲ್ಲ ಇವತ್ತು ಮಳೆ ಬಿದ್ದರೆ ನಾಳೆ ಮಳೆ ಬಿದ್ದಿಲ್ಲವೇನೋ ಎಂಬ ಭಾವನೆ ಬರುತ್ತಿತ್ತು ಇದಕ್ಕೆ ಮೂಲ ಕಾರಣ, ಒಂದು ವಾತಾವರಣದ ತಂಪನ್ನ ಬಯಲು ಸೀಮೆಯಲ್ಲಿ ಇಲ್ಲದ ಹಾಗೆ ಮಾಡಿದ್ದೇವೆ ಮರಗಿಡಗಳು ಕಡಿಮೆಯಾದವು Forest ಕಡಿಮೆಯಾಯಿತು ಕೆರೆಗಳಲ್ಲಿ ನೀರು ತುಂಬಿರಬೇಕಾಗಿತ್ತು ಯಾವುದೇ ಕೆರೆಯಲ್ಲಿ ಇವತ್ತು ನೀರು ಇಲ್ಲದೇ ತಂಪು ಇಲ್ಲದಂತೆ ಆಯಿತು ರೈನ್ ಫಾಲ್ ಕಡಿಮೆಯಾಯಿತು ಅದನ್ನು ನಾವು ರೈನ್ ಟ್ರಾಕ್ ಅಂತ ಕರೆಯುತ್ತೇವೆ ಎಲ್ಲಿ ತಂಪು ಇರುತ್ತದೆ ಅಲ್ಲಿ ಮಳೆಯಾಗುತ್ತದೆ ಈಗ ನಮ್ಮ ತುಮಕೂರಿನಲ್ಲಿ ತುರುವೇಕೆರೆ, ತಿಪಟೂರು ಈ ಭಾಗದಲ್ಲಿ ಏನಾದರು ಹೇಮಾವತಿ ನೀರು ಹರಿದುಕೂಂಡು ಹೋದರೆ ಮಳೆ ಕೂಡ ಅಲ್ಲಿಯೇ ಬೀಳುತ್ತದೆ ಇದು ಗೊತ್ತಿರುವುದೇ ವೈಜ್ಞಾನಿಕವಾಗಿ ಎಲ್ಲಿ ತಂಪು ಇರುತ್ತದೆ ಅಲ್ಲಿ ಮತ್ತೆ ಮಳೆಯಾಗುತ್ತದೆ ಮಳೆಯಾದರೆ ಮತ್ತೆ ತಂಪಾಗುತ್ತದೆ ಈ ಸ್ಥಿತಿಯಲ್ಲಿ ನಾವಿದ್ದಾಗ ನಾವು ಹೇಳಿದೆವು, ನಿಮ್ಮ ಹತ್ತಿರ ಹೇರಳವಾಗಿ ಹಣ ಇದೆ ಎಂದು ಹೇಳುತ್ತಿದ್ದೀರಿ Revenue surplus ರಾಜ್ಯಕ್ಕೆ ಇದೆ ಎಂದು ಹೇಳುತ್ತೀರಿ ಈಗಲಾದರೂ ಕೆಲಸದ ಕಡೆ ಪ್ರಾಜೆಕ್ಟ್‌ಗಳ ಕಡೆ ಹೋಗಿ ಈಗಲಾದರೂ ಈ ಚೀಪ್ ಪೋಗ್ರಾಮ್ಸ್ ಅನ್ನು, ಪಾಪ್ಯುಲಾರಿಟಿ ಪೋಗ್ರಾಮ್ಸ್ ಅನ್ನು ಕೈ ಬಿಡಿ ರಾಜ್ಯದ ಹಿತದೃಷ್ಟಿಯಿಂದ ಕೆಲಸ ಮಾಡಿ ನಾನು ಇಲ್ಲಿ ಒಂದು ಮಾತನ್ನು ಉಲ್ಲೇಖ ಮಾಡುತ್ತೇನೆ ಅಬ್ರಹಾಂ ಲಿಂಕನ್‌ರವರು ಒಂದು ಕಡೆ ಒಂದು ಮಾತನ್ನು ಹೇಳುತ್ತಾರೆ ನನಗೆ ಇವತ್ತು ಸಂವಿಧಾನ ಮತ್ತು ದೇಶ ಆಯ್ಕೆ ಮಾಡಿಕೊಳ್ಳುವಂತಹ ಸ್ಥಿತಿ ನಿರ್ಮಾಣವಾಗಿದೆ ಸಂವಿಧಾನ ನನ್ನ ಅಂಗಾಂಗ, ದೇಶ ನನ್ನ ಶರೀರ, ಶರೀರ ಇರಬೇಕೋ ಅಥವಾ ಅಂಗಾಂಗ ಇರಬೇಕೋ ಅಂದಾಗ ನಾನು ಸಂವಿಧಾನ ಆಯ್ಕೆ ಮಾಡಿಕೊಳ್ಳಲೋ ಅಥವಾ ದೇಶವನ್ನು ಆಯ್ಕೆ ಮಾಡಿಕೊಳ್ಳಲೋ ಎನ್ನುತ್ತಾರೆ ಪರ್ವೇಜ್ ಮುಷರಫ್‌ರವರು ಅವರ ಪುಸ್ತಕದಲ್ಲಿ ಅದನ್ನೂ ಕೋಟ್ ಮಾಡಿ ಬರೆಯುತ್ತಾರೆ ನಾನು ಕೂಡ ಇವತ್ತು ಹಾಗೆಯೇ ಮಾಡಿದ್ದೇನೆ ಎಂದು ಒಬ್ಬ ಮಿಲಿಟರಿ ಆಡಳಿತಗಾರ ಎದೆ

ತಟ್ಟಿಕೊಂಡು ಬರೆಯುತ್ತಾನೆ ನಾನು ಇಷ್ಟು ಕಿಲೋಮೀಟರ್ ಕೆನಾಲ್ ಅನ್ನು modernize ಮಾಡಿ ಇಷ್ಟು ಲಕ್ಷ ಎಕರೆಗಳಿಗೆ ನೀರು ಹೋಗುವಂತೆ ಮಾಡಿದ್ದೇನೆ ನಾನು ಇಷ್ಟು ಇರಿಗೇಶನ್ ಪ್ರಾಜೆಕ್ಟಗಳನ್ನು ಜಾಸ್ತಿ ಮಾಡಿ ಪಾಕೀಸ್ತಾನವನ್ನು drought ಬವಣೆಯಿಂದ ಆಚೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ ಮಾಡಿರುವುದು ಬಿಡುವುದು ಆ ಉಲ್ಲೇಖ ನಮಗೆ ಈಗ ಬೇಡ ಕನಿಷ್ಠ ಸೌಜನ್ಯಕ್ಕೆ ಈ ರಾಜ್ಯದಲ್ಲಿ ಬಂದಿರುವ ಸರ್ಕಾರಗಳು ಯಾವತ್ತಾದರೂ ಕುಳಿತು ನಾವು ಈ ಡ್ರಾಟ್ ಬರುತ್ತಿರುವ ಪ್ರದೇಶಕ್ಕೆ ಅದರಲ್ಲೂ ಪ್ರಮುಖವಾಗಿ ಬಯಲು ಪ್ರದೇಶಕ್ಕೆ ಒಂದು ಕಾರ್ಯಕ್ರಮವನ್ನು ನಿರೂಪಣೆ ಮಾಡಬೇಕು ಎಂದು ಯೋಚನೆ ಮಾಡಿದ್ದಾರಾ? ಮಾಡಲಿಲ್ಲ ಏನಾಗಿದೆ ನಮ್ಮ ಕಾರ್ಯಕ್ರಮಗಳು? ಒಂದು ಕಡೆ ಡ್ರಾಟ್ ಅನ್ನು ಮಾನಿಟರ್ ಮಾಡುವುದು ಇನ್ನೊಂದು ಕಡೆ ಡ್ರಾಟ್ ಅನ್ನು ನಿಭಾಯಿಸುವುದು ಇದರಲ್ಲಿಯೇ ಸರಿ ಹೋಗಿದೆ ನಾನು ಮತ್ತು ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಚೈನಾಗೆ ಹೋಗಿದ್ದೆವು ಬಹಳ ಸಂತೋಷವಾಯಿತು ತ್ರೀ ಘಾಟ್ಸ್ ಪ್ರಾಜೆಕ್ಟನ್ನು ನೋಡಿದಾಗ ನಮ್ಮನ್ನು ನೋಡಿ ನಕ್ಕರು ನಾವು ಹೋಗಬೇಕಾದರೆ ಮಾನ್ಯ ಹಂಪನಗೌಡರು ಬಂದಿದ್ದರು ಏನ್ರೀ ಹೋಗುತ್ತೀದ್ದೀರಿ ಎಂದು ನಮಗೆ ವಯಸ್ಸಾಯಿತಪ್ಪ ನಾವು ಇನ್ನು ಪಟ್ಟಣ ನೋಡುವ ಶೋಕಿ ಬೇಡ ನಾವು ಪ್ರಾಜೆಕ್ಟ್ ನೋಡಬೇಕು, ಮಾನ್ಯ ವಾಟಾಳರು, ಮಾನ್ಯ ರಮೇಶ್ ಕುಮಾರ್‌ರವರು, ರಾಜರು, ಮಹಾರಾಜರು ನೋಡಿಕೊಳ್ಳಲಿ, ನಾವು ಗ್ರಾಮೀಣ ಪ್ರದೇಶವನ್ನು ನೋಡುತ್ತೇವೆಂದು ಹೋಗಿದ್ದು ಸಾರ್ ನಾನು ನಿಮಗೆ ಹೇಳುತ್ತೇನೆ ನಾವು ಅಲ್ಲಿ ಕುಳಿತುಕೊಂಡು ಕೇಳಿದಾಗ ಅವಾಕ್ ಆಗಿ ಬಿಟ್ಟೆವು ನಾವು ಒಂದು ಕಡೆ ಅಲ್ಲಿ ಆಗುತ್ತಿದ್ದ ಫ್ಲಡ್ಸ್ ಅನ್ನು ರಿಸ್ಟ್ರಿಕ್ಟ್ ಮಾಡಿದರು ಇನ್ನೊಂದು ಕಡೆ ಆ ನೀರಿನಿಂದ ಡ್ರಾಟ್ ಅನ್ನು ಹೇಗೆ manage ಮಾಡಿದರು ನಾವು ಅನೇಕ ಸಲ ಹೇಳಿದೆವು Hats off to Krishnadevaraya Tank chain ಅನ್ನು ನಿರ್ಮಾಣ ಮಾಡಿದ್ದಾರೆ Reservoir chain ಅನ್ನು ನಿರ್ಮಾಣ ಮಾಡಿದ್ದಾರೆ ಏಳು ಜಿಲ್ಲೆಗಳಲ್ಲಿ ಇವತ್ತು ಬಿಹಾರ್‌ಗಿಂತ ನಮ್ಮ ರಾಜ್ಯ ಚೆನ್ನಾಗಿರುವಂತಹ ಸ್ಥಿತಿ ನಿರ್ಮಾಣವಾಗಿದೆ ಅಂದರೆ ಆ ಪುಣ್ಯಾತ್ಮರಿಂದ ಆಗಿದೆ, may be a feudalist. ರಾಜ್ಯದಲ್ಲಿ ಇವತ್ತು ಏನಾದರೂ ಅಭಿವೃದ್ಧಿ ಕಾಣುತ್ತಿದೆ ಎಂದರೆ ಅವರು ಮತ್ತು ಸರ್ ಎಂ ವಿಶ್ವೇಶ್ವರಯ್ಯನವರನ್ನು ನೆನೆಸಿಕೊಳ್ಳುತ್ತೇವೆ ಆ ವ್ಯವಸ್ಥೆಯನ್ನು ಕೂಡ

ನಾವು ಇವತ್ತು ಬಳಕೆ ಮಾಡಿಕೊಳ್ಳುವುದಕ್ಕೆ ಆಗಿಲ್ಲ ಸಕಲೇಶಪುರ ತಮಗೆ ಗೊತ್ತು ಪ್ರತಿ ವರ್ಷ ಹೋದ ವರ್ಷಕ್ಕಿಂತ ದುಪ್ಪಟ್ಟು ಮಳೆಯಾಗುತ್ತದೆ ಸಕಲೇಶಪುರದ ಪಕ್ಕ ಹಾಸನ ಅಲ್ಲಿ ಬರಗಾಲವಿದೆ ಸಕಲೇಶಪುರದಲ್ಲಿ ಈ ವರ್ಷ ಕಾಫಿ ಬೆಳೆ ಕೊಳೆತು ಹೋಗಿದೆ ಶುಂಠಿ ಬೆಳೆ ಕೊಳೆತು ಹೋಗಿದೆ ಸಕಲೇಶಪುರದಲ್ಲಿ ಮಾನ್ಯ ಶಿವಪ್ಪನವರು ಸಿಕ್ಕಿ ಒಂದು ಮಾತು ಹೇಳಿದರು ನಾನು ಕೊಳೆತ್ತಿಲ್ಲಪ್ಪ ಇನ್ನು ಎಲ್ಲಾ ಕೊಳೆತು ಹೋಗಿದೆ ಈ ವರ್ಷ ಸಕಲೇಶಪುರದಲ್ಲಿ ಮಳೆ ಹೆಚ್ಚಾಗಿ ಅಂತ ಪಕ್ಕದ ಹಾಸನ 20 ಕೀಲೋಮೀಟರ್ ಇದೆ ಅಲ್ಲಿ ನೇರವಾಗಿ ಬರಗಾಲದ ಪರಿಣಾಮವಾಗಿದೆ ಇದನ್ನು ನಾವು ಎಲ್ಲಿಯಾದರೂ ಒಂದು ಕಡೆ ಕುಳಿತು ಚರ್ಚೆ ಮಾಡಿದ್ದರೆ ರಾಜ್ಯವನ್ನು ನಾವು ಇವತ್ತು ಈ ಸ್ಥಿತಿಗೆ ತರುತ್ತಿರಲಿಲ್ಲ Temporary relief ಕೊಡುವುದು

ಶ್ರೀ ಎಂ ಪಿ ಪ್ರಕಾಶ್ – ಮಾನ್ಯ ಸದಸ್ಯರಿಗೆ ಪೂರಕವಾಗಿ ಎಂತಹ ವೈಚಿತ್ರಗಳು ನಡೆಯುತ್ತವೆ ಅಂದರೆ ಸಹಾರಾ ಮರು ಭೂಮಿಯಲ್ಲಿ ವಿಪರೀತ ಮಳೆಯಾಗಿ ಫ್ಲಡ್ಸ ಆಯಿತು ರಾಜಾಸ್ಥಾನದ ಮರುಭೂಮಿಯಲ್ಲಿ ವಿಪರೀತ ಮಳೆಯಾಗಿ ಫ್ಲಡ್ಸ ಬಂದಿದೆ ಅಂಟಾರ್ಟಿಕ ದಕ್ಷಿಣ ಧ್ರುವದಲ್ಲಿ warm ಆಗಿ ಹುಲ್ಲು ಬೆಳೆಯುತ್ತಿದೆ ಇದು ವಿಚಿತ್ರವಾದ ಸಂಗತಿ

SRI J C MADHUSWAMY It may be because of sunami effect ಅಂತ ಅವರು ಹೇಳುತ್ತಿದ್ದಾರೆ ಸುನಾಮಿ ಪರಿಣಾಮವೇನಾದರೂ ಆಗಿದೆಯೇ ಅಂತ ಹೇಳಿ ಒಂದು ಚರ್ಚೆಯಾಗುತ್ತಿದೆ ನಮ್ಮ ರೈನ್ ಸೀಜನ್ ಚೇಂಜ್ ಆಗುವುದಕ್ಕೂ ಕೂಡ ಅದೇ ಕಾರಣ ಅಂತ ಚರ್ಚೆಯಾಗುತ್ತಿದೆ Global warming ಈ ಸಲ ಶುರುವಾಗಿದೆ ಹಾಗಾಗಿ ನಾವು ಈ ಸಲ early monsoon ಅನ್ನು ನಾವು ನಿರೀಕ್ಷೆ ಮಾಡುತ್ತಿದ್ದೇವೆ Warm tides ಈ ಸಲ ಶುರುವಾಗಿದೆ ಅಂತ ನಾವು ಓದುತ್ತಿದ್ದೇವೆ ನಮ್ಮ ಕರ್ನಾಟಕದ ಪ್ರಶ್ನೆ ಬಂದಾಗ ನಮಗೆ ಈ ವರ್ಷ resources ಇತ್ತು ಈ ಹಣ ಹೆಚ್ಚಾಗಲಿಕ್ಕೆ ಯಾವ ಸರ್ಕಾರಗಳು ಕಾರಣವಲ್ಲ ಈ ಹಣ ಹೆಚ್ಚಾಗಲ್ಲಿಕ್ಕೆ ಟರ್ನ್ ಒವರ್ ಕಾರಣ ಈ ಹಣ ಹೆಚ್ಚಾಗಲಿಕ್ಕೆ ಡೀಸಲ್ ಮೇಲೆ ಪೆಟ್ರೋಲ್ ಮೇಲೆ ಹಾಕಿದ ಸೆಸ್ ಕಾರಣ ಈ ಹಣ ಹೆಚ್ಚಾಗಲಿಕ್ಕೆ ನಿಮ್ಮ volume of business ಕಾರಣ ಕೇಂದ್ರ ಸರ್ಕಾರದವರು subsidise ಮಾಡಿದ ಕಾರಣ ನಿಮಗೆ 250 ಕೋಟಿ ರೂಪಾಯಿಗಳು ಪುನರ್ ವಸತಿಗೆ ಬಂದ ಹಣ, ಕಾರಣ ಇವೆಲ್ಲಾ ಇದ್ದಾಗ ಎಲ್ಲಿಯಾದರೂ ಒಂದು ಕಡೆ

ಕುಳಿತುಕೊಂಡು ಈ ರಾಜ್ಯ ನಡೆಸುವರು ಈ ರಾಜ್ಯಕ್ಕೆ ಎನಾಗಿದೆ ಒಂದು ಕಡೆ ಫ್ಲಡ್ ಆಗಿ ಸಾಯುತ್ತಿದ್ದೇವೆ, ಇನ್ನೊಂದು ಕಡೆ ಮಳೆ ಇಲ್ಲದೆ ಸಾಯುತ್ತಿದ್ದೇವೆ ಇದನ್ನು ಬ್ಯಾಲೆನ್ಸ್ ಮಾಡಬೇಕಾ ಅಂತ ರಾಜ್ಯ ಸರ್ಕಾರದವರು ನಾನು ಈಗ ಮಾನ್ಯ ಈಶ್ವರಪ್ಪನವರನ್ನು ಪ್ರಶ್ನೆ ಕೇಳುತ್ತೇನೆ ನಾವು ಈ ಬಗ್ಗೆ ಚಿಂತನೆ ಮಾಡಿದ್ದೇವೆಯೇ Honest ಆಗಿ ನಾವು ಪಕ್ಷಗಳನ್ನು ಬಿಟ್ಟು ಮಾತನಾಡೋಣ ಇವತ್ತು ನಮ್ಮ ಹೇಮಾವತಿ ಬೇಸಿನ್‌ನಲ್ಲಿ ಎಷ್ಟು ನೀರು ವೇಸ್ಟ್ ಆಗುತ್ತಿದೆ ಎಲ್ಲಿಯಾದರೂ ಒಂದು ಕಡೆ ನಮ್ಮ ರಿಸರ್ವ್ ವಾಯರ್‌ಗೆ ಟರ್ನ್ ಮಾಡಿ ಕೊಟ್ಟಿದ್ದರೆ ಆಗುತ್ತಿರಲಿಲ್ಲವೇ ಎಲ್ಲಿಯಾದರೂ ಒಂದು ಕಡೆ ಅಂಡರ್ ಗ್ರೌಂಡ್ ವಾಟರ್ ಅನ್ನು ರೀ ಚಾರ್ಜ್ ಮಾಡಿಸಿದ್ದರೆ ಆಗುತ್ತಿರಲಿಲ್ಲವೇ? ಏನಾಗಿದೆ ಆಧ್ಯಕ್ಷರೇ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು ಕೋಲಾರ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರಿನ ಕಡೂರು, ಪಂಚನಹಳ್ಳಿ ಭಾಗ ಬೀರೂರು ಈ ಕಡೆ 700 ಅಡಿಗಳಿಂದ ಒಂದು ಸಾವಿರ ಅಡಿಗಳವರೆಗೂ ಬೋರ್‌ವೆಲ್‌ಗಳನ್ನು ಕೊರೆಯುತ್ತಿದ್ದೇವೆ ಇವತ್ತು ನೀವು ಕುಡಿಯುವ ನೀರಿಗೆ ಬೋರ್‌ವೆಲ್ ಹಾಕಿ ಬಂದರೆ ಒಂದು ವಾರ ಇರುತ್ತದೆ, 6 ತಿಂಗಳು ಇರುತ್ತದೆ ಆಮೇಲೆ ಬತ್ತಿ ಹೋಗುತ್ತದೆ Entire underground water ಅನ್ನು exploit ಮಾಡಿ ನಿಂತಿದ್ದೇವೆ Because of that, heat ಜಾಸ್ತಿಯಾಯಿತು ಈ ಕಡೆ ಕಾರ್ಯಕ್ರಮಗಳನ್ನು ಏನು ಮಾಡಿದಿರಿ ರಾಜ್ಯದಲ್ಲಿ ವಾಟರ್ ಶೆಡ್ program ಅನ್ನು ವ್ಯಾಪಕವಾಗಿ ಹಾಕಿಕೊಂಡಿದ್ದೀರಿ ಸಾರ್ ಎದೆ ಮುಟ್ಟಿಕೊಂಡು ಮಂತ್ರಿಗಳು ಹೇಳಬೇಕು Water shed program ನಲ್ಲಿ ಇವತ್ತು ಕರ್ನಾಟಕ ರಾಜ್ಯದಲ್ಲಿ ಏನಾಗಿದೆ ವಾಟರ್ ಶೆಡ್‌ನಲ್ಲಿ ನೀವು ಪ್ರೋಗ್ರಾಂ ಮಾಡಿದರೆ ಎರಡು ವರ್ಷ ಎಕ್ಸ್‌ಟೆನ್‌ಷನ್ ಅನ್ನು ನೀವು ವರ್ಲ್ಡ್ ಬ್ಯಾಂಕ್‌ನ್ನು ಏಕೆ ಕೇಳುತ್ತಿದ್ದೀರಿ ನಿಮ್ಮ ಅಧಿಕಾರಿಗಳು ಬಂದು ಎರಡು ವರ್ಷ ಎಕ್ಸ್‌ಟೆನ್‌ಷನ್ ಕೊಡಿ ಅಂದ್ರೆ ಕೊಟ್ಟು ಕುಳಿತುಬಿಟ್ಟರಿ Next, additional water sheds ನೀವು ಎಲ್ಲಿ ಮಾಡುತ್ತೀರಿ ? 3 ಕೋಟಿ 4 ಕೋಟಿ 5 ಕೋಟಿ ಹಣ ಕೊಟ್ಟರು ಅಂತ ವಾಟರ್ ಶೆಡ್ ಪ್ರೋಗ್ರಾಂನಲ್ಲಿ ಏನ್ ಜಿ ಓ ಗಳಿಗೆ ವಹಿಸಿಬಿಟ್ಟಿದ್ದೇವೆ Surface water manage ಮಾಡಿದ್ದೇವೆ ನೀರನ್ನು ತಡೆದು ನೀರನ್ನು ಇಂಗಿಸು, ನೀರನ್ನು ಹರಿಸು ಎನ್ನುವ ಸ್ಲೋಗನ್ ನೀವು ಹೇಳಿಕೊಂಡು ಬಂದಿದ್ದೀರಲ್ಲ ಯಾವ ವಾಟರ್ ಶೆಡ್‌ನಲ್ಲಿ ನೀವು ಇವತ್ತು ಈ ಕಾರ್ಯಕ್ರಮವನ್ನು ಯಶಸ್ವಿ ಮಾಡಿದ್ದೀರಿ ನನಗೆ ಗೊತ್ತಿರುವಂತೆ ಒಂದು ಜಿಲ್ಲೆ

ಕೂಡ 30 ಪರ್ಸೆಂಟ್‌ಗಿಂತ ಜಾಸ್ತಿ ಕೆಲಸ ಆಗಲಿಲ್ಲ ಒಂದು ವರ್ಷದ ಕಾರ್ಯಕ್ರಮ training ಮಾಡುವುದು, ಪ್ರಚಾರ ಮಾಡುವುದು, ಮೀಟಿಂಗ್ ಮಾಡುವುದು, ಯಾರು ಲೀಡ್ ಎನ್ ಜಿ ಒ ಇದ್ದರೂ ಅವರು ಮಾಡಿ ಹೋಗಿ ಬಿಟ್ಟರೆ ಅದರ ನಂತರದ ಕಾರ್ಯಕ್ರಮಗಳೆಲ್ಲಾ ಸ್ಟಾರ್ಟ್ ಆಗಿದೆ ಕೂಲಿ ಜನರೇಟ್ ಆಗುತ್ತಿತ್ತು ವಾಟರ್ ಮ್ಯಾನೇಜ್‌ಮೆಂಟ್ ಆಗುತ್ತಿತ್ತು ನಿಮ್ಮ ಡ್ರೈ ಲ್ಯಾಂಡ್ ಎಲ್ಲಾ ಅಫಾರ್ ಸ್ಟೇಷನ್ ಆಗುತ್ತಿತ್ತು ಗ್ರೀನರಿ ಬೆಳೆಯುತ್ತಿತ್ತು ಹಾರ್ಟಿಕಲ್ಚರ್ ಕ್ರಾಪ್ ಬೆಳೆಯುತ್ತಿತ್ತು ಇವತ್ತು ಒಂದು ಎಕರೆಯೂ ಇಲ್ಲ 5,000 ಹೆಕ್ಟೇರ್, 8000 ಹೆಕ್ಟೇರ್ ವಾಟರ್‌ಷೆಡ್ ತೆಗೆದುಕೊಳ್ಳುತ್ತೇವೆಂದು ಹೇಳುವ ಕಡೆ, ಒಂದು ಎಕರೆ ಕೂಡ ಪ್ಲಾಂಟೇಷನ್ ಸಮರ್ಪಕವಾಗಿ ಆಗುತ್ತಿಲ್ಲ ಅಲ್ಲಿ ನೀವು ವಿಫಲರಾದಿರಿ ಅಲ್ಲಿ ಏನಾದರೂ ನೀವು ಕೂಲಿಗಾಗಿ ಹಣವನ್ನು ಖರ್ಚು ಮಾಡಿಸಿದ್ದರೆ ಅಲ್ಲಿ ಕೆಲಸ ನಿರ್ಮಾಣ ಮಾಡಿದ್ದರೆ ನಿಮಗೆ ರಿಲೀಫ್‌ನಲ್ಲಿ ಒತ್ತಡ ಬೀಳುತ್ತಿರಲಿಲ್ಲ It is mere economics ನಮಗೆ ಕೆಲಸ ಬೇಕು ನಮಗೆ ಎಲ್ಲಿಯಾದರೂ ಕೊಡಿ ಕೆಲಸವನ್ನು ಕೊಡಲೇ ಇಲ್ಲ ಒಂದು ಕಡೆ circular ಕೊಟ್ಟರು ಜೆ ಸಿ ಬಿ ಯನ್ನು ಯಾವ ಕಾರಣಕ್ಕೂ ಬಳಸಕೂಡದು ಎಂದು ಇನ್ನೊಂದು ಕಡೆ ಇಲ್ಲ ಎಂತಹ ಪರಿಸ್ಥಿತಿ ನಿರ್ಮಾಣವಾಯಿತು ದಿಢೀರ್ ಎಂದು ಜಿಲ್ಲಾಧಿಕಾರಿಗಳು ನಿಮ್ಮ ರಿಲೀಫ್ ಕೆಲಸಗಳನ್ನು ಶುರು ಮಾಡಿಕೊಂಡರು ಮಾನ್ಯ ಪ್ರಕಾಶ್‌ರವರೇ ಯಾವ ಪ್ಲಾನ್‌ನಲ್ಲಿ ಶುರು ಮಾಡಿದರು? Do you know what D C s have done? ತಮಗೆ ಇಷ್ಟ ಬಂದ ಕಡೆ ಕೆಲಸ ಶುರು ಮಾಡಿದರು ಎರಡನೇ ಹಂತದಲ್ಲಿ, ಮೂರನೇ ಹಂತದಲ್ಲಿ ಎಂ ಎಲ್ ಎ ಗಳನ್ನು ಈ ಸಲ ಕನ್ಸಲ್ಟ್ ಮಾಡಿದರು ಮೊದಲನೆ ಹಂತದ ಕೆಲಸವನ್ನು ಅವರಿಗೆ ಇಷ್ಟ ಬಂದ ಕಡೆ ಕೆಲಸ ಕೊಟ್ಟಿದ್ದಾರೆ ಬೇರೆ ಇಲಾಖೆಯ ಅಧಿಕಾರಿಗಳನ್ನು ಕರೆದು ನೀನು ಈ ಕೆಲಸ ಮಾಡು, ನೀನು ಈ ಕೆಲಸ ಮಾಡು ಎಂದು ಹೇಳಿದ್ದಾರೆ ತಾವು ಬೇಕಾದರೆ ತುಮಕೂರು ಜಿಲ್ಲೆಯನ್ನು ರಿವ್ಯೂ ಮಾಡಿ ತುಮಕೂರು ಜಿಲ್ಲೆಗೆ ಬಂದ ಅಕ್ಕಿ ಎಲ್ಲಿ ಹೋಯಿತು? ಮಾನ್ಯ ರಾಜಣ್ಣನವರು ಹೇಳಬೇಕು ನಾವು ಮೀಟಿಂಗ್ ಹಾಲ್‌ನಲ್ಲಿ ಮೊನ್ನೆ ಮಾತನಾಡಿದೆವು ನಾಲ್ಕು ಸಾವಿರ ಟನ್ ಅಕ್ಕಿ ಎಲ್ಲಿಗೆ ಹೋಯಿತು ಯಾರಿಗೆ ಕೊಟ್ಟರು ಎಂದು ಕೇಳುವವರೇ ಇಲ್ಲ Early programme ಮಾಡಿ ಎಂದು ಹೇಳಿದವರು ಯಾರು? ಇಲಾಖೆಯವರನ್ನು ಕರೆಯುವುದು, ಇಂತಿಂಥ ಕೆಲಸವನ್ನು ಮಾಡಿ ಎಂದು ನೇಮಿಸುವುದು, ಪ್ಲಾನ್ /

ಮಾಡಿರುವಿರಾ? ಹಾಗಾದರೆ ಲೇಬರ್ ಲಿಸ್ಟ್ ಅನ್ನು ಅನೌನ್ಸ್ ಮಾಡಿಸಿದ್ದೀರಾ? ಗ್ರಾಮ ಪಂಚಾಯ್ತಿ ಚಾವಡಿ ಮೇಲೆ ಅವರ ಹೆಸರುಗಳು ಇವೆಯೇ? ಪುರಸಭಾ ಆಫೀಸಿನಲ್ಲಿ ಅವರ ಹೆಸರುಗಳು ಇವೆಯೇ? ಯಾರಾದರೂ ಒಬ್ಬ ಸಹಿ ಮಾಡಿ ನಿಮ್ಮ ಹತ್ತಿರ ಪೇಮೆಂಟ್ ತೆಗೆದುಕೊಂಡು ಹೋಗಿದ್ದಾನೆಯೇ? ಏನೂ ಇಲ್ಲ ಇನ್ನೊಂದು ಸಮಸ್ಯೆ ಸೃಷ್ಟಿ ಆಯಿತು ತಾವು ಮೂರು ರೂಪಾಯಿಗೆ ಪಿ ಡಿ ಎಸ್ ನಲ್ಲಿ ಅಕ್ಕಿ ಕೊಟ್ಟಿರಿ ಇಲ್ಲಿ Food for work ನಲ್ಲಿ 6 25 ರೂ ಗಳನ್ನು ಮಾಡಿದರು ಯಾರು ತೆಗೆದುಕೊಳ್ಳುತ್ತಾರೆ? ಮೂಲಭೂತವಾದ ಪ್ರಶ್ನೆಯನ್ನು ನೀವು ಟ್ಯಾಕಲ್ ಮಾಡಿರುವಿರಾ? The very man who purchases rice at three rupees has to take rice at Rs 6 25 ಇದರಲ್ಲಿ ಸ್ಕ್ಯಾಂಡಲ್ ಆಗಿದೆಯೇ ಎಂದರೆ ಆಗದೇ ಇರುತ್ತದೆಯೇ? ಮಾನ್ಯ ರೆವಿನ್ಯೂ ಮಿನಿಸ್ಟರ್ ಇದಕ್ಕೆ ಉತ್ತರಿಸುವಿರಾ? ನಮಗೆ ಸೊಸೈಟಿಯಲ್ಲಿ ಮೂರು ರೂಪಾಯಿಗೆ ಅಕ್ಕಿ ದೊರೆಯುತ್ತದೆ ಅದೇ ಮನುಷ್ಯ ನಿಮ್ಮ ಹತ್ತಿರ ಕೂಲಿ ಮಾಡಿ 6 25 ರೂ ಗಳನ್ನು ಕೊಟ್ಟು ಅಕ್ಕಿ ತೆಗೆದುಕೊಳ್ಳುವ ಪರಿಸ್ಥಿತಿ ಇರಬೇಕಾದರೆ ಅಷ್ಟು ಹಣವನ್ನು ಕೊಟ್ಟು ಅಕ್ಕಿಯನ್ನು ಯಾರು ತೆಗೆದುಕೊಳ್ಳುತ್ತಾರೆ ಅದು ಸಾಧ್ಯವೇ ಇಲ್ಲ ಏನಾದರೂ ಪರಿಹಾರ ಕಂಡುಹಿಡಿದಿದ್ದೀರಾ? ಅಧಿಕಾರಿಗಳು ಏನಾಗಬೇಕು? ನಾವೇನಾಗಬೇಕು? ಅಕ್ಕಿ ಮಾರಿದ್ದಾರೆ ಅಂತ ನಾವೀಗ ಒಪ್ಪಿಕೋಬೇಕಲ್ಲ ನಾಳೆ ಯಾರು ಉತ್ತರ ಹೇಳೋರು? Is it not your job to find out some solution? ಕಲಿತುಕೊಳ್ಳಿ ಆಂಧ್ರದ ಮಾಜಿ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಹತ್ತಿರ, open ಆಗಿ declare ಮಾಡಿ ಅವರು ಈ ಅಕ್ಕಿ ಮಾರಿಸಿದರು, yes I am selling rice through societies and PDS ಆ ದುಡ್ಡನ್ನು ನಾನಿಲ್ಲಿ ಬಳಸು ತ್ತಿದ್ದೀನಿ ಅಂತ ಕೆಲಸಗಳಾದರೂ ಆಯಿತು ಇಲ್ಲಿ ಏನೂ ಆಗುತ್ತಿಲ್ಲ, ಒಂದು ಕಡೆ ಅವರಿಗೆ ಅಕ್ಕಿ ಕೊಡಲು ಆಗುತ್ತಿಲ್ಲ ಇನ್ನೊಂದು ಕಡೆ ಅವರು ಅಕ್ಕಿ ತಗೊಳುತ್ತಿಲ್ಲ ಮತ್ತೊಂದು ಕಡೆ ನಿಮ್ಮ ಹತ್ತಿರ ಅಕ್ಕಿ ಸ್ಟಾಕೇ ಇಲ್ಲ ಇವತ್ತು ಕರ್ನಾಟಕದಲ್ಲಿ ಚಿಂತನೆ ನಡೆದಿದೆ, ಅದೂನೂ cash ಕೊಟ್ಟುಬಿಡುವುದೋ ಹೇಗೆ ಅಂತ ಇನ್ನು ವರ್ಕಿಗೆ ಯಾರನ್ನು ಜವಾಬ್ದಾರಿ ಮಾಡುತ್ತಿದ್ದೀರಿ? ಬರಗಾಲ ಅಂತ declare ಮಾಡಿದ ತಕ್ಷಣ ಮಾನ್ಯ ಕಂದಾಯ ಸಚಿವರೇ Advance ಆಗಿ ಅಕ್ಕಿಯನ್ನು ಕೊಡಬೇಕು ಅಂತ ನಿಯಮ, ಇಲ್ಲವಲ್ಲ ನಿಮ್ಮ ಹತ್ತಿರ, ಎಲ್ಲಿದೆ ನೋಡೋಣ ಹೇಳಿ, ಎಲ್ಲಿ ತಾವು advance ಆಗಿ food ಕೊಟ್ಟು ಈ ರಾಜ್ಯದಲ್ಲಿ ಕಾಮಗಾರಿ

ಮಾಡಿಸುತ್ತಿದ್ದೀರಿ? ಮಾಡಿಸಲಿಕ್ಕೆ ನಿಮ್ಮ ಹತ್ತಿರ ಎಲ್ಲಿದೆ ದುಡ್ಡು? account ಕೊಡಿ Please place it on the table ಇಲ್ಲಾಂದಮೇಲೆ ಏನು ಮಾಡಬೇಕು ಅಂತ ಸರ್ಕಾರ ನಡೆಸೋರು ಆಲೋಚನೆ ಮಾಡಿದ್ದೀರಾ? ಅದು ರಾಜ್ಯ ಸರ್ಕಾರದ್ದ ಕೇಂದ್ರ ಸರ್ಕಾರದ್ದ ಎಂಬ ಚರ್ಚೆ ಅಲಾಯಿದ How are you tackling the problem? ಹೇಳಬೇಕಲ್ಲ ನೀವು, ಕೋಟಿ ಕೋಟಿ, ಅಷ್ಟು ಕೋಟಿ ಕೊಟ್ಟೆ ಇಷ್ಟು ಕೋಟಿ ಕೊಟ್ಟೆ ಅಂತ ಬೂಸಿ ಬಿಟ್ಟುಕೊಂಡು ಓಡಾಡಿಬಿಟ್ಟರೆ ಕೆಲಸ ಆಯಿತಾ? ಜನಗಳಿಗೇನಾದರೂ ಸಹಾಯ ಆಯಿತಾ? No work is turned up ನೀವೇನು ಮೊದಲನೇ ಹಂತದಲ್ಲಿ 25 ಲಕ್ಷ ನಮಗೆಲ್ಲ ಒಂದೊಂದು ಕ್ಷೇತ್ರ ಅಥವಾ ತಾಲ್ಲೂಕಿಗೆ ಕೊಟ್ಟಿರಿ ಅದರಿಂದ ಮಾತ್ರ prompt ಆಗಿ ಕೆಲಸವಾಗಿದೆ, next ಒಂದು ಕೋಟಿ ಒಂದೊಂದು ಕ್ಷೇತ್ರಕ್ಕೆ ಕೊಟ್ಟಿದ್ದೇವೆ ಎಂಬ ಕೆಲಸ ಸ್ಲಾಟಾಗಿದೆ ಆನೆಸ್ಟಾಗಿರುವವರು ಯಾರೂ ಕೆಲಸ ಮಾಡಲು ಆಗುತ್ತಿಲ್ಲ ರೈಸಿಲ್ಲ, ಲೇಬರ್ ಬರಯಲು ಆಗುತ್ತಿಲ್ಲ, ಮೆಶಿನನ್ನು ಮುಟ್ಟ ಬಾರದು ಅಂತೀರಿ ಇನ್ನು supervisory staff ಹೆಚ್ಚು ಮಾಡಿಕೊಂಡು ಹೋಗಿದ್ದೇ ಒಂದು ದೊಡ್ಡ ಸಾಧನೆ ಯಾರ್ರೀ ನಿಮ್ಮ third party inspection One percent ಕೊಟ್ಟರೆ ಕೂತಿದ್ದ ಕಡೆ ಅವನು ಇವತ್ತು ಸೈನ್ ಹಾಕು ತ್ತಾನೆ ಯಾರೂ ಅದಕ್ಕೋಸ್ಕರ ಹೆಮ್ಮೆ ಪಟ್ಟುಕೊಳ್ಳಬೇಕಾಗಿಲ್ಲ Nodal officer ಯಾರು? ನಿಮ್ಮ ಜಿಲ್ಲ ಪಂಚಾಯ್ತಿಯವನು, ಕೂತಿದ್ದ ಕಡೆ ಅವನಿಗೆ ಪರ್ಸಂಟೇಜ್ ಬೇಕು Third party inspection ಮಾಡುವುದು university ಯವನೋ ಕಾಲೇಜಿನವನೋ ಕೂತಿದ್ದ ಕಡೆ ಪರ್ಸಂಟೇಜ್ ಬೇಕು ಬೋರ್ಡ ಹಾಕ ಬೇಕು, ತಗೊಂಡುಹೋಗಿ ಅವನ ಮುಂದೆ ಇಡಬೇಕು ಮಾನ್ಯ ಈಶ್ವರಪ್ಪನವರೇ ಆಗ ಅವನು ಸೈನ್ ಹಾಕಿಕೊಡುವುದು ಯಾರೂ ಬರಲಿಲ್ಲ inspectionಗೆ Asst. Commissioner inspect ಮಾಡಬೇಕು, ತಹಸೀಲ್ದಾರ್ inspect ಮಾಡಬೇಕು, ಜಿಲ್ಲಾ ಪಂಚಾಯ್ತಿಯವರು inspect ಮಾಡಬೇಕು ಇಂಜಿನಿಯರಿಂಗ್ ಇಲಾಖೆಯಿಂದ ಕೆಲಸಗಳು ಆಗಿರಬೇಕು Third party ಬರಬೇಕು, nodal officer ಬರಬೇಕು ಎಲ್ಲೀವರೆಗೆ ತಗೊಂಡುಹೋಗುತ್ತಿದ್ದೀರಿ ಒಂದು ಸಣ್ಣ ಆಡಳಿತವನ್ನು ಎಷ್ಟು ಜನರ ಕೈಲಿ inspect ಮಾಡಿಸುತ್ತಿದ್ದೀರಿ worksನ್ನು ಸತ್ಯ ಒಪ್ಪಿಕೊಂಡು ಕನಿಷ್ಠ ರಾಜ್ಯದ ಪ್ರಗತಿ ಆದರೂ ಯಾಕೆ ಮಾಡಲಿಲ್ಲ ಸಾರ್ ಇವತ್ತು ಬರ ಪರಿಹಾರದ ಕಾಮಗಾರಿ ಕೂಲಿಗಾಗಿ ಅಂತ ಉಳಿದಿಲ್ಲ ಹೋಗಲಿ ಆ ಹೆಸರಿನಿಂದ ಸಣ್ಣಮಟ್ಟ

ಕೆಲಸಗಳಾದರೂ ಆಗುತ್ತಿವೆಯಾ ಸಮರ್ಪಕವಾಗಿ ಅಂದರೆ ಅದಕ್ಕೆ ತಾವು ಉಪಸಮಿತಿಯಲ್ಲಿ ಕೂತು ಚರ್ಚೆ ಮಾಡಿ ಇದನ್ನು ಹೇಗೆ ತಿಳಿ ಮಾಡಬೇಕು ಅಂತ ಮಾಡಲಿಲ್ಲ ಮೂರನೆಯದು with due respect to this Government ನಿಮಗೆ ಯಾರಿಗೂ ಇದರಲ್ಲಿ ಆಸಕ್ತಿ ಇಲ್ಲ ಆಸಕ್ತಿ ಯಾರೂ ತೋರಿಸಿಲ್ಲ ಇವತ್ತಿನವರೆಗೆ ನಾನು ಎರಡು ಸಭೆ ಮಾಡಿ ಕೇಳಿದೆ, simple thing ಅಪ್ಪ, IP set ಇರೋರ್ಗೆ 10 ಗುಂಟೆ 20 ಗುಂಟೆ ಮೇವು ಬೆಳೆದುಕೊಳ್ತಪ್ಪ, ನಾವು ಮೇವಿಗಾಗುವಂತಹ ಬೀಜ ಕೊಡುತ್ತೇವೆ ಆಮೇಲೆ ಅನುಕೂಲ ಇಲ್ಲದೇ ಇರೋರ್ಗೆ ಮಾರಬಹುದು ಅಂತ ನೀವು ಎಲ್ಲಾದರೂ ಹೇಳಿದ್ದೀರ? ಹೇಳಿಲ್ಲ ಆದರೆ ಗೋಶಾಲೆಯನ್ನು ಕಡ್ಡಾಯ ಮಾಡುತ್ತೇವೆ ಅಂತ ಹೇಳಿದಿರಿ, ಎಲ್ಲಾ ತಾಲೂಕಿನಲ್ಲೂ ಒಂದೊಂದು ಗೋಶಾಲೆ ಇರಬೇಕು ಅಂತ ಹೇಳಿದ್ದೀರಿ, 4 ರಿಂದ 5 ಸಾವಿರ ರಾಸನ್ನು ಅಲ್ಲಿಗೆ ತಗೊಂಡುಹೋಗಿ ಕೂಡಿ ಅಂತ ಹೇಳಿದ್ದೀರಿ,

ಶ್ರೀ ಎಂ ಪಿ ಪ್ರಕಾಶ್ (ಗೃಹ, ಕಾನೂನು, ಸಂಸದೀಯ ವ್ಯವಹಾರಗಳ ಸಚಿವರು) 2 ಸಾವಿರಕ್ಕೊಂದು ಟನ್ನಿನಂತೆ ನಾವು ಖರೀದಿ ಮಾಡಲು ತಯಾರಿದ್ದೇವೆ, ಕೆಲವು ಕಡೆ ತೆಗೆದುಕೊಂಡಿದ್ದಾರೆ ಮೆಕ್ಕೆಜೋಳದ್ದರ ರೇಟ್ ಸಹ ಕೊಟ್ಟಿದ್ದೇವೆ, ಮತ್ತು ಕೆಲವು ಕಡೆ ತೆಗೆದುಕೊಂಡಿದ್ದಾರೆ farmಗಳಿಂದಲೂ ಇಂಧಾದ್ದು ಕೊಂಡಿದ್ದಾರೆ

ಶ್ರೀ ಜೆ ಸಿ ಮಾಧುಸ್ವಾಮಿ ಇಲ್ಲ, ನಾನೇ ಕೂತು ಸ್ಕೀಂ ಕೇಳಿದೆ, ನಾನೇ ಕೂತು ರೈತರನ್ನು ಕರೆಸಿ ನೋಡಪ್ಪ 10–20 ಗುಂಟೆ ಎಲ್ಲಾದರೂ ಬೆಳೆಸಿಕೊಡುತ್ತೇವೆ ಯಾರಿಗೆ ಅನುಕೂಲವಿಲ್ಲವೋ ಅವರಿಗೆ ಮಾರುವ ಸ್ಥಿತಿ ನಿರ್ಮಾಣ ಮಾಡಿ ಅಂದಾಗ ತುಮಕೂರು ಜಿಲ್ಲೆಯಲ್ಲಾಗಿರುವ ತೀರ್ಮಾನ ಸಾರ್ ನಾವು ಗೋಶಾಲೆ ಮಾತ್ರ ಮಾಡಬೇಕು fodder assistanceಗೆ ಅವರು ಒಪ್ಪಿಲ್ಲ ಅಂತ ಸ್ಪಷ್ಟವಾಗಿ ಹೇಳಿರುವುದರ ಮಾಹಿತಿ ತಾವು ತರಿಸಬೇಕು ಹಿಂದೆಯೆಲ್ಲ ಲಾರಿ ಬಾಡಿಗೇನೋ ಮತ್ತೊಂದೋ ನಾವೇ ಕೊಟ್ಟುಬಿಟ್ಟು ಎಲ್ಲಿ ಮೇವಿದೆಯೋ ಅಲ್ಲಿಂದ ತರಿಸಲಾದರೂ ಮಾಡುತ್ತಿದ್ದೆವು ಅದೇನಾದರೂ ಮಾಡಿದಿರಾ? ಇವತ್ತಿನ ತನಕ ಆಗಿಲ್ಲ,

ಶ್ರೀ ಎಂ ಪಿ ಪ್ರಕಾಶ್ ನೋಡಿ, ಅಗತ್ಯ ಪ್ರೋತ್ಸಾಹಿಕ ಕ್ರಮಗಳನ್ನು ಜಿಲ್ಲಾಧಿಕಾರಿಗಳು ಕೈಗೊಳ್ಳುವುದು,- ಮೇವು ಕೊರತೆ ಇರುವ ಕಡೆಗೆ ಜಿಲ್ಲಾಧಿಕಾರಿಗಳು ಮೇವು ಖರೀದಿಸುವುದು ಹಾಗೂ ಸಾಗಾಣಿಕೆ ವೆಚ್ಚವನ್ನು

ಸರ್ಕಾರದ ಆದೇಶ ಸಂಖ್ಯೆ 311, 20–6–2003 ರಂತೆ CRF ಅಡಿ ಭರಿಸುವುದು, ಸರ್ಕಾರದ ಆದೇಶ ಸಂಖ್ಯೆ 91, 2003, 20–1–2004ರಲ್ಲಿ ನಿಗದಿಗೊಳಿಸಿದ ದರವನ್ನೇ ಮುಂದುವರೆಸುವುದು, ಮೇವು ಬ್ಯಾಂಕ್ ಗಳಿಂದ ಮೇವು ವಿತರಿಸುವುದು, ಹೊರರಾಜ್ಯಗಳಿಗೆ ಮೇವು ಸಾಗಾಣಿಕೆ ಮಾಡುವುದನ್ನು ಜಿಲ್ಲಾಧಿ ಕಾರಿಗಳು ನಿರ್ಬಂಧಿಸುವುದು ಆದ್ದರಿಂದ ಮೇವಿಗೆ ಸಂಬಂಧಪಟ್ಟಂತೆ ರೇಟನ್ನು ಹಾಕಿ 1500 ರೂಗಳಿಗೆ ಮೆಕ್ಕೆ ಜೋಳದ ದಿಂಡು ಕೊಳ್ಳುವುದು, ಹುಲ್ಲು ಮೊದಲಾದವಕ್ಕೆ ಟನ್ನಿಗೆ 2000 ರೂನಂತೆ ಖರೀದಿ ಮಾಡಬೇಕು ಅಂತ ನಿರ್ಧಾರ ಮಾಡಿ ಅವರಿಗೆ ಅಧಿಕಾರ ಕೊಟ್ಟು ಹಣವನ್ನೂ ಕೊಟ್ಟಿದ್ದೇವೆ

ಶ್ರೀ ಜೆ ಸಿ ಮಾಧುಸ್ವಾಮಿ ನಮಗೆ ಈವರೆಗೆ ಅದು communicate ಆಗಿಲ್ಲ, atleast ನಾವು serious ಆಗಿ ತಗೊಳೋರು, ನಾವು ರೈತರ ಮನೇಲಿರೋರು, ಹಳ್ಳಿಗಳಲ್ಲಿ ಬದುಕಿರೋರು, ಜಾನುವಾರುಗಳನ್ನು ಕಟ್ಟಿಕೊಂಡಿರೋರು, ಆ ಕಷ್ಟ ನಮಗೆ ಗೊತ್ತಿದೆ If cattle population is lost one third of the income of the family is lost ಅಂತ ತಿಳಿದುಕೊಂಡಿರುವವರು ನಾವು ಎರಡು ವರ್ಷಗಳ ಹಿಂದೆ ಭಾಷಣ ಮಾಡುವಾಗ ನಾನು ಹೇಳಿದ್ದೇನೆ, ಈ ವರ್ಷ ಜಾನುವಾರುಗಳನ್ನು 5 ಸಾವಿರ 4 ಸಾವಿರಕ್ಕೆ ಮಾರುತ್ತಿದ್ದೀರಿ ರೈತರು ಇನ್ನು ಎರಡು ವರ್ಷಕ್ಕೆ 20 ಸಾವಿರಕ್ಕೆ ಅದನ್ನೇ ಕೊಂಡುಕೊಂಡು ಬರಬೇಕು ಅಂತ ಆ ಸ್ಥಿತಿ ನಿರ್ಮಾಣವಾಗಿದೆ ಇವತ್ತು, ಮನುಷ್ಯರು manage ಆಗುತ್ತಿದ್ದಾರೆ, ಪಶುಸಂಪತ್ತು ಇವತ್ತು ರಾಜ್ಯದಲ್ಲಿ ನಾಶವಾಗಿಹೋಗುತ್ತಿದೆ

ಶ್ರೀ ಕೆ ಆರ್ ರಮೇಶ ಕುಮಾರ್ ನಮ್ಮಲ್ಲಿ ಹೆಚ್ಚು ಹೈನುಗಾರಿಕೆ ಮಾಡುತ್ತೇವೆ ಅದಕ್ಕೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಂಡಿರುತ್ತೇವೆ ಅಲ್ಲಿ ಇಲ್ಲಿ 5–10 ಗುಂಟೆ green fodder ಹಾಕಿಕೊಂಡಿರುತ್ತೇವೆ ಕೆಲವು ಕಡೆ ಹೆಚ್ಚು ಹನಿ ಬಿದ್ದ ಕಡೆ horse gram ಬೆಳೆದುಕೊಂಡು ಅದನ್ನು ಸ್ಟೋರ್ ಮಾಡಿ ಕೊಂಡಿದ್ದೇವೆ ರೈತನ ಪಡಿಪಾಟಲು ಅಂದ್ರೆ he undertakes so many experiments to protect himself against this ನಮಗೆ ತೊಂದರೆ ಎಲ್ಲಿ ಬರುತ್ತದೆ ಅಂದ್ರೆ ಶೇಂಗ ಬೆಳೆದಿಲ್ಲ, ರಾಗಿ ಆಗಿಲ್ಲ, ಅದೇ major fodder, other than cross breed cows ನಾಟಿ ಯಾವುವಿವೆ ಅವುಗಳಿಗೆ ಇಲ್ಲಿ ಮೇವಿಲ್ಲ ಬೆಳೆ ಆಗಿಲ್ಲ, haystack ಇಲ್ಲ ನಮ್ಮ ಹತ್ತಿರ, ಇದನ್ನು ಅದಕ್ಕೆ ಹಾಕಿ ಸಾಕಲು ಆಗುವುದಿಲ್ಲ Commercially it is not viable ಜಿಲ್ಲಾಧಿಕಾರಿಗಳಿಗೆ ಈ

classification ಎಲ್ಲ ಹೇಗೆ ಗೊತ್ತಾಗಬೇಕು ಹೇಳಿ, ಅವರು ಡೆಹ್ರಾಡೂನ್ ನಲ್ಲಿ ಪರೀಕ್ಷೆ ಮಾಡಿ ಬಂದವರು Somewhere down the line ಇದರ ಬಗ್ಗೆ ಕಾಳಜಿ, ಒಂಚೂರು involvement ಇರೋರು ಇದ್ದರೆ ಸಮನ್ವ coordination ಬೇಕು ಎಂದು ಅವರದು ಇವರದು ಮಾಡಿ not that ಅವರನ್ನು ಡಿಸ್ಕಾರ್ಡ್ ಮಾಡಿಬಿಡೋಣ ಅಂತ ಅಲ್ಲ ಅವರ ಮೇಲೆ aspersions caste ಮಾಡಿ ಅಂತ ನಾನು ಹೇಳುವುದಿಲ್ಲ ಅವರಿಂದ ಇದನ್ನೆಲ್ಲ ನಿರೀಕ್ಷೆ ಮಾಡುವುದು ನಮಗೂ ಕೂಡ ಟೂ ಮಚ್ ಆಗಿಬಿಡುತ್ತದೆ It is a crisis All of us will have to collectively put our efforts together to manage the crisis

ಶ್ರೀ ಜೆ ಸಿ ಮಾಧುಸ್ವಾಮಿ ಈ ಗೋಶಾಲೆ ವಿಚಾರ ಯಾರು ಇವರ್ ತಲೆಗೆ ತಂದರೋ ನಮಗೆ ಅರ್ಥವಾಗುವುದಿಲ್ಲ ಈ ಗೋಶಾಲೆಯನ್ನು ನೀವ್ಯಾಕೆ compulsory ಮಾಡುತ್ತೀರಿ, 5 ಸಾವಿರ ರಾಸು ಕೂಡಿಕೊಂಡು ನೀರು ಕೊಡುವ ಸ್ಥಳ ಇದೆಯೆ? ಮೇವು ಕೊಡುವ ಸ್ಥಳ ಇದೆಯೆ? Animal health care ತಗೊಳೋ ಸ್ಥಳ ಇದೆಯೆ? ರೈತರು ನಿಜವಾಗಿ ರಾಸು ಕೊಡುತ್ತಿಲ್ಲ, ನಾನೇನು ನಿಮ್ಮನ್ನು accuse ಮಾಡಬೇಕಾಗಿಲ್ಲ ಇವತ್ತಿನವರೆಗೆ ಮೇವು ತರೋಗೆ ಸ್ಕೋಪ್ ಕೊಟ್ಟಿಲ್ಲ, ಇವತ್ತಿನವರೆಗೆ ಒಂದು ಬಿಲ್ ಮಾಡಿಲ್ಲ ನಮಗ್ಯಾರಿಗೂ ಇವತ್ತಿನವರೆಗೂ ನೀವು ರೈತರಿಗೆ ಹೇಳಿ ನಾವು ಕೊಡುತ್ತೇವೆ ಅಂತ ಹೇಳಿಲ್ಲ ಸೊಸೈಟಿ ಅಥವ Animal husbandry department ಮೂಲಕ ನಾವು ಕೊಟ್ಟಿರುವ ಹಣದಿಂದ ಪ್ರಾಜೆಕ್ಟ ಮಾಡಿ ಒಂದಷ್ಟು ಬೀಜ ಕೊಟ್ಟಿದ್ದೇವೆ, ಇಲ್ಲ ಅಂತ ಹೇಳುವುದಿಲ್ಲ, ಮೇವು ಬೆಳೆದುಕೊಳ್ಳಪ್ಪ ಅಂತ, ಎಷ್ಟು ಜನರಿಗೆ ಕೊಡುತ್ತೀರಿ ನೀವು, 50, 60 ಭಾರಿ ಅಂದ್ರೆ 100 familyಗೆ ಕೊಡುತ್ತೀರಿ, ಅಷ್ಟು ಬಿಟ್ಟು ಮೇವಿಗೆ substitute ಮಾಡುವುದನ್ನು ನೀವು ಯೋಚನೇನೆ ಮಾಡಿಲ್ಲ It is your duty ನಿಮ್ಮ ಕೆಲಸ, ಮೇವು ಎಲ್ಲಿದೆ, ಯಾವ ಜಿಲ್ಲೆಯಿಂದ ಎಲ್ಲಿಗೆ ತರಬೇಕು ಯಾರ್ಯಾರು ಎಲ್ಲಿಗೆ ಹೋಗಬೇಕು ಅಂತ ಏನಾದರೂ ಒಂದು ಕಾರ್ಯಕ್ರಮ ಮಾಡಬೇಕಲ್ಲ, ಅದರ ಸಾರಿಗೆ ವೆಚ್ಚವಾದರೂ ಕೊಡಬೇಕಲ್ಲ ನೀವು, ಇವತ್ತು ಏನಾಗಿದೆ? ಮನುಷ್ಯರು ಹೇಗೋ ನಿಭಾಯಿಸಿಕೊಂಡು ಹೋಗುತ್ತಾರೆ ಪ್ರಾಣಿ ಪಕ್ಷಿಗಳ ಸ್ಥಿತಿಯೇನು ಅಂತ ಯಾರೂ ಯೋಚನೆ ಮಾಡಲಿಲ್ಲ ಯಾವ ಹಂತದಲ್ಲೂ ಅದರ ಬಗ್ಗೆ ಚರ್ಚೆ ನಡೆದಿಲ್ಲ ಈಗ ಸುಮ್ಮನೆ ಕೋಟಿ ಕೋಟಿ, ಯಾಕೆ ಈ ದೃಷ್ಟಾಂತ ರಾಜ್ಯಕ್ಕೆ

ಬಂತೋ ಗೊತ್ತಿಲ್ಲ ಎಲ್ಲರೂ ಕೋಟಿಯಲ್ಲೇ ಮಾತನಾಡುವುದು, ಕೆಲಸದಲ್ಲಿ ಯಾರೂ ಮಾತನಾಡುತ್ತಿಲ್ಲ ಈಗ, ಏನ್ರೀ ಬೆಲೆಯಿದೆ ನಿಮ್ಮ ಕೋಟಿಗೆ ಈಗ, your money is not money today It is currency It is not money Even dollar is not money It is currency Both of them have lost their value ಕೋಟಿ ಕೋಟಿ, ಆಗುತ್ರೀ, ನಿಮ್ಮ money value ಅಲ್ಲಿಗೆ ಬಂದಿದೆ, 10 ವರ್ಷದ ಹಿಂದೆ ಲಕ್ಷ ಇದ್ದುದು ಇವತ್ತು 10 12 ಲಕ್ಷಕ್ಕೆ ಬಂದಿದೆ ನಿಮ್ಮ ಸರ್ಕಾರ ದೊಡ್ಡ ಸಾಧನೆ ಮಾಡಲಿಲ್ಲ ಇಷ್ಟು ಕೋಟಿ ಖರ್ಚು ಮಾಡಿಬಿಟ್ಟೆವು ಅಂತ ಹೇಳಿಕೊಂಡಾಗ, ಎಲ್ಲಿಗೆ ಕೊಟ್ಟಿದ್ದೀರಿ ಕೋಟಿಗಳನ್ನು, ಏನು ಪ್ರಾಜೆಕ್ಟಾಗುತ್ತದೆ ಅದರಿಂದ, ಶರಾವತಿ ಡ್ಯಾಮ್ ಕಟ್ಟಿದಾಗ ಎಷ್ಟುಖರ್ಚಾಗಿತ್ತು, ಈಗ ಅಂತಹ ಡ್ಯಾಂ ಕಟ್ಟಲು ಎಷ್ಟು ಖರ್ಚು ಆಗುತ್ತದೆ ಅಂತ compare ಮಾಡಿ, ದಯವಿಟ್ಟು ಹೀಗೆ ಕೋಟಿಗಳಲ್ಲಿ ಹೇಳುವುದನ್ನು ನಿಲ್ಲಿಸಿಬಿಟ್ಟರೆ ರಾಜ್ಯಕ್ಕೊಂದು ಸತ್‌ಗತಿ ಸಿಗುತ್ತದೆ ಮಾತು ಎತ್ತಿದರೆ ಕೋಟಿ, ಕೋಟಿ ನಮಗೆ ಸಣ್ಣದು ಗೊತ್ತಾಗುವುದಿಲ್ಲ, ನಾವು ರೈತರು ಎಂದು ಹೇಳಿ ಏನಾಗಿದೆ ನಿಮ್ಮ ಕೋಟಿಯಲ್ಲಿ ಎಂದು ಹೇಳಬೇಕಲ್ಲ ಏನು ಆಗುವ ಹಾಗೆ ಇಲ್ಲ ಸಾರ್ ಕೋಟಿಯಲ್ಲಿ ಒಂದು ಕಿಲೋ ಮೀಟರ್ ನಾಲೆಯನ್ನು ಮಾಡುವುದಕ್ಕೆ ಐದಾರು ಏಳು ಕೋಟಿ ಖರ್ಚಾಗುವ ಕಾಲ ಇದು ಏನಾಗಿದೆ? ನಿಮ್ಮ ನಬಾರ್ಡ್ ರೋಡು 30–35 ಲಕ್ಷ ಒಂದು ಕಿಲೋಮೀಟರ್‌ಗೆ ಖರ್ಚಾಗುತ್ತಿರುವ ಕಾಲ ಇದು ಪಕ್ಕಾ ರೋಡು ಮಾಡಬೇಕೆಂದರೆ ಒಂದು ಕೋಟಿ ಖರ್ಚು ಮಾಡುತ್ತಿರುವ ಕಾಲವಿದು ನಾಲ್ಕು ಲಕ್ಷ ರೂಪಾಯಿಗಳನ್ನು ನಾವು ಎಂಎಲ್‌ಎಗಳಾದಾಗ ಖರ್ಚು ಮಾಡುತ್ತಿದ್ದ ರೋಡಿಗೆ ಇವತ್ತು ನೀವು 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿರುವ ಕಾಲವಿದು ಕೋಟಿ ಕೋಟಿ ಕೋಟಿ ಎಂದು ಹೇಳಿ ನಿಮ್ಮ Finance Minister ಎಲ್ಲ ಕೋಟಿಗಳಲ್ಲೇ ಹೇಳಿ ನಮಗೆಲ್ಲಾ ಸಿನಿಮಾ ನಟಿಯರನ್ನು ತೋರಿಸಿ ಮನೆಯವರನ್ನೇ ಮರೆಸಿದರೆ ಗತಿಯೇನು? ಇವತ್ತು practical ಆಗಿ ಹೇಳಿ ಎಷ್ಟು potentialನ್ನು physical ಆಗಿ ತಾವು create ಮಾಡಿದಿರಿ ಎಂದು ಹೇಳಿ ಎಷ್ಟು ಲಕ್ಷ ಎಕರೆ ಯನ್ನು ತಾವು protective irrigation ಕೆಳಗೆ 10–15 ವರ್ಷದಿಂದ ತಂದಿದ್ದೀರಿ ಎಂದು ಹೇಳಿ Not even a single acre Tribunal ಇದೆ, ಅದು ಇದೆ, ಇದು ಇದೆ, distributaries ಮಾಡುವ ಹಾಗೆ ಇಲ್ಲ, ಯಾರು prevent ಮಾಡಿದರು ಸಾರ್ ನಿಮಗೆ ಎರಡು–ಮೂರು

ಜಿಲ್ಲೆಗಳಲ್ಲಿ protective irrigation ಅನ್ನು ಈ ರಾಜ್ಯದಲ್ಲಿ ಕೊಡುವುದಕ್ಕೆ ಸಾಧ್ಯ ಇತ್ತು ಬೇರೆ ಕಾರ್ಯಕ್ರಮಗಳಿಗೆ ಇತಿಶ್ರೀ ಹಾಡಿ ರೈತರ ನೆರವಿಗೆ ಬರಬೇಕಾಗಿತ್ತು ರೈತರೊಬ್ಬರೇ ಉಳಿದುಕೊಳ್ಳುತ್ತಿರಲಿಲ್ಲ ರೈತರು ನಂಬಿದ ಕಸುಬು ಉಳಿಯುತ್ತಿತ್ತು ಅಲ್ಲಿಯ ಕಸುಬುದಾರರು ಉಳಿಯುತ್ತಿದ್ದರು ಈ ಬೆಂಗಳೂರಿಗೆ ವಲಸೆ ಬರುವವರು ಉಳಿಯುತ್ತಿದ್ದರು ನಿಮ್ಮ garments factories ಏನಿದೆ, ಆ ಕಡೆ shift ಆಗುತ್ತಿತ್ತು ಆಗ ಮಾಡಲಿಲ್ಲ Entire ಜನಾಂಗ ಮೊದಲು ನಮ್ಮ ಕಡೆ ಸಕಲೇಶಪುರದ ಕಡೆಗೆ ವಲಸೆ ಹೋಗುತ್ತಿದ್ದರು Plantationನಲ್ಲಿ ಒಳ್ಳೆಯ rate ಸಿಗುತ್ತೆ ಎಂದು ನಮ್ಮವರು ಸಕಲೇಶಪುರದವರು ಎಲ್ಲಾ ಸೇರಿ ಬೆಂಗಳೂರು ಪೀಣ್ಯಾಗೆ ಬರುತ್ತಿದ್ದಾರೆ ಯಾರಿಗಾದರೂ ಕೇಳಿ ಬೊಮ್ಮಸಂದ್ರ, ಪೀಣ್ಯ ಇಡೀ ತುಮಕೂರು, ಹಾಸನದಲ್ಲಿರುವವರು ಈ ಕಡೆ shift ಆಗುತ್ತಿದ್ದಾರೆ ಎರಡನೆಯದು ಏನಾಗಿದೆ ಸಾರ್, ನಿಮ್ಮ ಕಾರ್ಯಕ್ರಮಗಳೆಲ್ಲ ಹಳದಿ ಕಾರ್ಡ್ ಮೇಲೆ ನಿಂತಿದೆ ಬೀಜ ತೆಗೆದುಕೊಳ್ಳಬೇಕಾದರೂ ಹಳದಿ ಕಾರ್ಡ್ ಅಕ್ಕಿ ತೆಗೆದುಕೊಳ್ಳಬೇಕಾದರೂ ಹಳದಿ ಕಾರ್ಡು ಔಷಧಿ ತೆಗೆದುಕೊಳ್ಳಬೇಕಾದರೂ ಹಳದಿ ಕಾರ್ಡು What is the fate of middle class? Middle class ಸ್ಥಿತಿ agriculture ಅನ್ನು ನೆಚ್ಚಿಕೊಂಡಿರುವ ಸ್ಥಿತಿಯೇನು ಎಂದು ಇಲ್ಲಿ ಯಾರಿಗಾದರೂ ಹೇಳಿ ಯಾವ ರಾಷ್ಟ್ರ middle classಗೆ ಹೆಸರಾಗಿತ್ತೋ ಆ ರಾಷ್ಟ್ರದಲ್ಲಿ middle class ಅನ್ನು ನಿರ್ನಾಮ ಮಾಡಿ Poor class ಕೆಳಗೆ ತಾವು ಇವತ್ತು ಸೇರಿಸುತ್ತಿದ್ದೀರಿ We are forced to go as poor class tomorrow ನಮಗೆ remuneration ಇಲ್ಲ ನಾನು ಇವತ್ತು ಕೊಬ್ಬರಿ ಮಾರಬೇಕೆಂದರೂ ಕೂಡ 30 ಕ್ವಿಂಟಾಲ್ ಮೇಲೆ ಮಾರುವ ಹಾಗೆ ಇಲ್ಲ ಸಾರ್ 30 ಕ್ವಿಂಟಾಲ್ ವರೆಗೆ ನನಗೆ ನಿಮ್ಮ subsidy ಆಮೇಲೆ ಇಲ್ಲ ನಮ್ಮ ಮನೆಯಲ್ಲಿ ಯಾರಾದರೂ cycle ಮೇಲೆ ಓಡಾಡುವ ಹಾಗೆ ಇಲ್ಲ ನಾನೊಂದು ಹಳದಿ ಕಾರ್ಡನ್ನು ತೆಗೆದುಕೊಳ್ಳಲೇಬೇಕು ಔಷಧಿ ಬೇಕಾದರೂ ನಾನು ಹಳದಿ ಕಾರ್ಡನ್ನು ತೆಗೆದುಕೊಳ್ಳಲೇಬೇಕು ನಾನು ಬೆಳಿಗ್ಗೆ ಮಾತನಾಡೋಣವೆಂದಿದ್ದೆ ಯಾರಿಗೆ ಕೊಡುತ್ತಿದ್ದೀರಿ ಔಷಧಿಯನ್ನು? ಹಳದಿ ಕಾರ್ಡ್‌ನವರಿಗೆ ಮಾತ್ರ ಈ ಸ್ಥಿತಿಯನ್ನು ರಾಜ್ಯದಲ್ಲಿ ನಿರ್ಮಾಣ ಮಾಡಿ which was middle class in rural areas you are killing them ಏನು ಮಾಡಲಿಲ್ಲ ಸುಮ್ಮನೆ ಒಂದು ಕೈಮಸುಕು ಮದ್ದು ಹಾಕಿಬಿಟ್ಟಿರಿ ಬಾಯಿತುಂಬ ಅವರಿಗೆ TV ನೋಡುವುದು,

ಸಾಲ ಮನ್ನಾ ಮಾಡುತ್ತೇವೆ, ಬಡ್ಡಿ ಮನ್ನಾ ಮಾಡುತ್ತೇವೆ ಎಂದು ಹೇಳಿ ಅದರಲ್ಲೇ ಅವರು ನಮ್ಮ ಉದ್ಧಾರ ಇದೆ ಎಂದು ತಿಳಿದುಕೊಂಡುಬಿಟ್ಟರು ಅಷ್ಟೇ ಕಾರ್ಯಕ್ರಮವನ್ನು ಅವರಿಗೆ ಕೊಡುವ ಗೋಜಿಗೆ ಹೋಗಲಿಲ್ಲ ನೀವು ಎಷ್ಟು ಮನ್ನಾ ಆಗುತ್ತೋ ಏನಾಗುತ್ತೋ ಅದನ್ನು ಹೇಳಲಿಲ್ಲ ನೀವು ಖುಷಿ ಏನಾದರೂ ಸಾಲ ಮಾಡಿಕೊಬಹುದು, ಇವರು ಮನ್ನಾ ಮಾಡಿಬಿಡುತ್ತಾರೆ ನಾನೆಲ್ಲೋ ಓದುತ್ತಿದ್ದೆ why we want to be rich ಎನ್ನುವ ಒಂದು ಪುಸ್ತಕವನ್ನು ಬರೆದಿದ್ದಾರೆ, ತಾವು ತೆಗೆದುಕೊಂಡು ಓದಿ ಒಂದು basic ಅನ್ನು ಅವನು ಹೇಳುತ್ತಾನೆ ನಿನಗೆ ಏನೂ ತಿಳಿಯದಿದ್ದರೆ clear your debts, have some savings, ನಿನಗೆ capacity ಇದ್ದರೆ risk ತೆಗೆದುಕೊಳ್ಳುವ ಹಾಗೆ ಇದ್ದರೆ have some investment. Investment ಮಾಡುವ ಶಕ್ತಿ ಇದ್ದರೆ ನಿನ್ನ ಕೈಯಲ್ಲಿ ಮಾಡು ನಿನ್ನ ಕೈಯಲ್ಲಿ ಏನೂ ಮಾಡುವುದಕ್ಕಾಗದಿದ್ದರೆ debts ಅನ್ನು clear ಮಾಡಿಕೊಂಡುಬಿಡು ಸಾಲ ಮಾಡಬೇಡ ಸ್ವಲ್ಪ ಎಲ್ಲಾದರೂ saving ಮಾಡಿಕೊ ಒಂದು ಹತ್ತು ವರ್ಷ ತಳ್ಳುತ್ತೀಯಾ ಎಂದು ಹೇಳುತ್ತಾನೆ Even that savings value zero ಆಗುತ್ತೆ ನಿನಗೆ ಹತ್ತು ವರ್ಷ ಆದಮೇಲೆ money valueನಲ್ಲಿ But you are bound to do that ಎಂದು ಅಧಿಕಾರವನ್ನು ನಮಗೆ ಬಿಡಿ ಪ್ರಕಾಶ್ ರವರೆ ಸಾಲ ಮಾಡುವ ಚಟವನ್ನು ಏತಕ್ಕೆ ತಂದು ಹಳ್ಳಿಯವರಿಗೆ ತುಂಬುತ್ತಿದ್ದೀರಿ? ಯಾರು ಕೇಳಿದ್ದರು ನಿಮಗೆ? ' ಬರೀ ಸಾಲ, ಸಾಲ ಸಾಲ ಮಾಡು, ವಜಾ ಮಾಡು ಎಂದು ಕಾಯ್ದುಕೊಂಡು ಕೂತುಕೊ Institutions ಅನ್ನು ನಿರ್ಮಾಮ ಮಾಡುತ್ತಿದ್ದೀರಿ, Familyಗಳನ್ನು ನಿರ್ಮಾಮ ಮಾಡುತ್ತಿದ್ದೀರಿ, Laziness ಅನ್ನು hundred percent ತಂದಿಟ್ಟಿದ್ದೀರಿ ಈ ಕಾರ್ಯಕ್ರಮಗಳನ್ನು ತಾವು ಯೋಚನೆ ಮಾಡಬೇಕು ಪಕ್ಷ, ಸರ್ಕಾರ ಇಲ್ಲ ಈ ವರ್ಷದಷ್ಟು ಅಸಡ್ಡೆ, ಬರವನ್ನು ಎದುರಿಸುವುದಕ್ಕೆ ಯಾವ ವರ್ಷವೂ ನಡೆದಿದ್ದು ನೋಡಲಿಲ್ಲ ತಾವು ತುಮಕೂರಿನಲ್ಲಿ meeting ಮಾಡಿ ಹೋದಿರಿ ಬೇರೆ ಪ್ರಶ್ನೆ ಆದರೆ ಅದೇ ಪ್ರಮಾಣದಲ್ಲಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಚರ್ಚೆಯಾಗಿದೆಯಾ, Meeting ಆಗಿದೆಯಾ? Officers ಯಾರಾದರೂ ನಮ್ಮನ್ನು ಕೂಡಿಸಿಕೊಂಡು ಏನು ಮಾಡಬೇಕೆಂದು ಕೇಳಿದ್ದಾರಾ? We are the Chairmen of the taluk relief committees ಅವರು ಕೊಟ್ಟಿರುವುದು ಅಧಿಕಾರ ಅದು constitute ಆಗಿದೆಯಾ? ಯಾವ ಯಾವ

programme ಮಾಡುತ್ತಿದ್ದೀರಿ, ಎಲ್ಲಿ labour ಇದ್ದಾರೆಂದು ಗೊತ್ತಿದೆಯಾ? ನಿಮಗೆ ಯಾವ ಊರಿನಲ್ಲಿ ಕೆಲಸವಾಗುತ್ತಿದೆ? ಗೊತ್ತಿದೆಯಾ? ಏನೂ ಚರ್ಚೆಯಾಗಿಲ್ಲ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ, ಬಿಡುಗಡೆ ಮಾಡಿದ್ದೇವೆ, ಒಂದೊಂದು ಜಿಲ್ಲೆಗೆ ಒಬ್ಬೊಬ್ಬರು Secretary cadre officerಗಳನ್ನು ಹಾಕಿದ್ದೀರಿ ಪಾಪ, ಅವರು ತೋರಿಸಿದ್ದನ್ನು ನೋಡಿಕೊಂಡು ಬರುತ್ತಾರೆ ಅವರೇನು ಎಲ್ಲ ಹಳ್ಳಿಗಳನ್ನು ನೋಡಿರುತ್ತಾರಾ? ಇದರಿಂದ ತಾವು ರೈತರ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿದಿದ್ದೀರಿ ಎಂದು ಭಾವಿಸುವುದಕ್ಕಾಗುವುದಿಲ್ಲ You have utterly failed in implementing drought programmes ಎರಡನೆಯದು, ನಮಗೆ ನೋವಿದೆ, ಕೇಂದ್ರ ಸರ್ಕಾರ ಕೂಡ ಈ ವರ್ಷ ರಾಜ್ಯದ ನೆರವಿಗೆ ಅಷ್ಟಾಗಿ ಬಂದಿಲ್ಲ ಅದೇನೊ ನಿಮ್ಮ failure ಅಥವಾ ರಾಜಕೀಯ ಕಾರಣವೋ, ನಾವು ಅದನ್ನು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ ಒಂದನ್ನು ತಾವು ಯೋಚನೆ ಮಾಡಬೇಕು ಕರ್ನಾಟಕದಲ್ಲಿ Horticulture ನಿರ್ಮಾಮವಾಗುವ ಒಂದು ಸ್ಥಿತಿ ನಿರ್ಮಾಣವಾಗಿದೆ ಕರ್ನಾಟಕಕ್ಕೇನಾದರೂ agricultureನಲ್ಲಿ ಒಂದು ಪ್ರೌಢಿಮೆ ಇದ್ದಿದ್ದರೆ, ಹಿರಿಮೆ ಇದ್ದಿದ್ದರೆ ನಾವು Horticultureನಲ್ಲಿ ಮುಂದೆ ಇದ್ದೆವು ಎಂದು ಇತ್ತು ಎಲ್ಲಾ ರಾಜ್ಯಗಳೂ horticultureನಲ್ಲಿ progress ಮಾಡುತ್ತಿದ್ದರೆ ನಾವು ಹಿಂದೆ ಬರುತ್ತಿದ್ದೇವೆ ತಾವು ಮಾಹಿತಿಯನ್ನು ತರಿಸಿ ನೋಡಿ ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ನಾವು ಮಾವಿನ ಹಣ್ಣನ್ನು ತೆಗೆದುಕೊಂಡು ಹೋಗುತ್ತಿದ್ದವರು ಇವತ್ತು ಯಾರೂ ತೆಗೆದುಕೊಂಡು ಹೋಗುವುದಿಲ್ಲ ಸಾರ್ ಕೋಲಾರದಿಂದ ಪೂನಾಗೆ ಮಾವಿನ ಹಣ್ಣು ರಫ್ತು ಆಗುತ್ತಿತ್ತು ಇವತ್ತು ಯಾರೂ ತೆಗೆದುಕೊಂಡು ಹೋಗುವುದಿಲ್ಲ ತಿಪಟೂರು ಕೊಬ್ಬರಿ ಬಿಟ್ಟರೆ ಕೊಬ್ಬರಿಯೇ ಇಲ್ಲ ಎನ್ನುವ ಸ್ಥಿತಿ ಇದ್ದುದು ಇವತ್ತು ಯಾರೂ ಕೇಳುವುದಿಲ್ಲ ನಿಮ್ಮ ಬಿಜಾಪುರ ಬಿಟ್ಟರೆ ಒಳ್ಳೆಯ ದ್ರಾಕ್ಷಿ ಇಲ್ಲಿ ಆಗುತ್ತಿದ್ದುದು ಇವತ್ತು ಯಾರೂ ಕೇಳುವುದಿಲ್ಲ ನಿಮ್ಮ ದಾಳಿಂಬೆಯನ್ನು ಇವತ್ತು ಯಾರೂ ಕೇಳುತ್ತಿಲ್ಲ ವಾಸ್ತವವಾಗಿ ಕೇಳುತ್ತಿಲ್ಲ Why? ನಮ್ಮನ್ನು model ಮಾಡಿಕೊಂಡು ಅವರು ಕಲಿತುಕೊಂಡರು ನಾವು ನಿಂತಲ್ಲೇ ನಿಂತೆವು ಅದವಾ ಕೆಳಕ್ಕೆ ಬಂದೆವು Again ನಾನು quote ಮಾಡುತ್ತೇನೆ, ಒಂದು ಕಾಲವಿತ್ತು Green revolution ಆಗಬೇಕು, Production ಜಾಸ್ತಿಯಾಗಬೇಕು ಎಂದು ಇವತ್ತು ನೀವು ಯೋಚನೆ ಮಾಡಬೇಕಾಗಿದೆ Per

year per acre productionನ್ನು ನೀವು ಜಾಸ್ತಿ ಮಾಡಬೇಕು And without chemical farming ಇವತ್ತು ಮಾಡಬೇಕು ಏನಾದರೂ thinking ಇದೆಯಾ? ಈ ಸರ್ಕಾರಕ್ಕೇನಾದರೂ ಆಲೋಚನೆ ಇದೆಯಾ? ಭೂಮಿಯನ್ನು ವಿಸ್ತಾರ ಮಾಡುವುದಕ್ಕಾಗುವುದಿಲ್ಲ ಜನಸಂಖ್ಯೆಯನ್ನು ತಾವು ಕುಗ್ಗಿಸುವುದಕ್ಕಾಗುವುದಿಲ್ಲ Production ಅಷ್ಟೇ ಇದ್ದರೆ ನಿಮಗೆ ಆಗುವುದೇ ಇಲ್ಲ Every year ಒಂದೊಂದು ಲಕ್ಷ ಟನ್ production ಕರ್ನಾಟಕದಲ್ಲಿ ಕಡಿಮೆಯಾಗುತ್ತಿದೆ ಎಲ್ಲಿಯಾದರೂ ನೀವು ಯೋಚನೆಯನ್ನು ಮಾಡಿದ್ದೀರಾ? ಎಲ್ಲಾದರೂ ಕೂತು ಮಂತ್ರಿಗಳಾಗಿದ್ದೇವೆ, ಜನಗಳ ಋಣದಲ್ಲಿ ಇದ್ದೇವೆ ನಾವು, ನಾವೇನಾದರೂ ಅವರ ಋಣವನ್ನು ತೀರಿಸದೇ ಹೋದರ ಪಾತಕಿಗಳಾಗುತ್ತೇವೆನ್ನುವ ಭಾವನೆ ಇದೆಯಾ? ನಾನು ಹೇಳಲಿಲ್ಲ ಈ ಮಾತನ್ನು ವಿವೇಕಾನಂದರು ಹೇಳಿದ್ದು ಎಲ್ಲಿಯವರೆಗೆ ಈ ದೇಶದ ವಿದ್ಯಾವಂತ ಈ ದೇಶದ ಅನಕ್ಷರತೆ ಬಡತನವನ್ನು ನಿರ್ಮೂಲನೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುವುದಿಲ್ಲ, ಅಲ್ಲಿಯವರೆಗೆ ನಾನು ಅವನನ್ನು traitor ಎಂದು ಕರೆಯುತ್ತೇನೆ I have every right to quote Vivekananda here We have all become traitors ನಾವೆಲ್ಲ ಇವತ್ತು ಜನಗಳಿಗೆ traitorsಗಳಾಗಿದ್ದೇವೆ ಅವರ vote ಹಾಕಿಸಿಕೊಂಡು ಬಂದು ಇವತ್ತು ನಾವು AC ಕೆಳಗೆ ಕುಳಿತುಕೊಳ್ಳುತ್ತೇವೆ ಅವರ vote ಹಾಕಿಸಿಕೊಂಡು 50–60 ಸಾವಿರ ದುಡ್ಡನ್ನು ತೆಗೆದುಕೊಳ್ಳುತ್ತೇವೆ, ಅವನ ಋಣವನ್ನು ತೀರಿಸುವುದಕ್ಕೆ ನಾವೇನು ಮಾಡುತ್ತಿದ್ದೇವೆಂದರೆ big zero ನಮ್ಮದೇ ಕಲಹ ನಮ್ಮದೇ ವ್ಯಾಜ್ಯ ನಮ್ಮದೇ ತೆವಲು ನಮ್ಮದೇ ತೀಟೆ ಇಷ್ಟಕ್ಕೆ ನಾವೆಲ್ಲ MLA, ಮಂತ್ರಿಗಳಾಗಿ ಕೆಲಸವನ್ನು ಮಾಡಬೇಕಾಗಿದೆಯಾ? ಮಾಡಲಿಲ್ಲ ದಯಮಾಡಿ ಹೇಗಾದರೂ ಮಾಡಿ ತಾವು ಈ ಕಡೆ ಆಲೋಚನೆಯನ್ನು ಮಾಡಬೇಕು ನಾನು ತಮಗೆ advice ಮಾಡುವುದು ಈಗಲಾದರೂ ಕುಳಿತುಕೊಂಡು ಮೊದಲನೇ ಆದ್ಯತೆ ಮೇಲಿಗೆ ಕೊಡಬೇಕು ಇಡೀ ಪ್ರಪಂಚದಲ್ಲಿ ಯಾವುದಾದರೂ ಉದ್ದಿಮೆ ಇದ್ದರೆ hundred percent ಬಂಡವಾಳವನ್ನು ಒಂದು ವರ್ಷಕ್ಕೆ ವಾಪಸ್ ಕೊಟ್ಟರೆ ಹಾಕಿರುವ ಮೂಲವಸ್ತುವನ್ನು ಇನ್ನೊಂದು ರೂಪದಲ್ಲಿ ನಮಗೆ ಲಾಭ ಮಾಡಿಕೊಟ್ಟರೆ ಅದು animal husbandry ಅಥವಾ ನಮ್ಮ poultry ಒಂದು ಹಸುವನ್ನು ಸಾಕಿದರೆ ಇನ್ನೊಂದು ಹಸುವನ್ನು ಮುಂದಿನ ವರ್ಷ ಕೊಡುವಂಥದ್ದು ಅಂಥ ಉದ್ದಿಮೆಯನ್ನು ನೀವು ನಾಶ ಮಾಡಿದರೆ

6 00 P M

production costನ್ನು ನೀವು agriculture sideನಲ್ಲಿ ಜಾಸ್ತಿ ಮಾಡುತ್ತಾ ಹೋದರೆ ಜನುಮದಲ್ಲಿ ನೀವು ರಾಜ್ಯದ ರೈತರಿಗೆ ನೀವು ನ್ಯಾಯವನ್ನು ದೊರಕಿಸಿಕೊಡುವುದಕ್ಕಾಗುವುದಿಲ್ಲ There is constraint for market ಯಾವುದೇ ವಸ್ತುವನ್ನು ಇಲ್ಲಿ ಬೆಳೆಯುತ್ತಾ ಹೋದರೆ production cost ಜಾಸ್ತಿಯಾಗುತ್ತಾ ಹೋದರೆ ಅಲ್ಲಿ ಮಾರಾಟವಾಗುವುದಿಲ್ಲ Subsidized ಮಾಡಬೇಕಾಗುತ್ತೆ ಈ ಕಡೆ ಆಲೋಚನೆ ಮಾಡಿದಾಗ ದಯಮಾಡಿ ಒಣಭೂಮಿ ಏನಿದೆ, ಬಯಲು ಪ್ರದೇಶ ಏನಿದೆ, ಪದೇ ಪದೇ ಬರಗಾಲಕ್ಕೆ ತುತ್ತಾಗುತ್ತಿರುವ ಪ್ರದೇಶಗಳೇನು ಇವೆ, ಅದನ್ನು ನೀವು ಒಂದು target groupನಲ್ಲಿಟ್ಟುಕೊಂಡು ಅದಕ್ಕೇನಾದರೂ treatment ಮಾಡುವ plan ಅನ್ನು ನೀವು ಮಾಡಲೇಬೇಕು ಎರಡನೆಯದು, ನಿಮ್ಮದು rain water harvesting Hundred percent ಕರ್ನಾಟಕದಲ್ಲಿ ನೀವು flop ಆಗಿದ್ದೀರಿ ನಾವು ಬಹಳ ಆಸೆಯನ್ನು ಇಟ್ಟುಕೊಂಡಿದ್ದೆವು Rain water harvesting ಅನ್ನು ತಂದುಬಿಟ್ಟಿರಿ, ಕೇಂದ್ರ ಸರ್ಕಾರದವರು ಬೇಕಾದಷ್ಟು subsidy ಕೊಟ್ಟರು ಎಂದು ಎಲ್ಲಿ ಶೇಖರಣೆಯಾಗಿದೆ ನೀರು? Schoolಗಳಿಗೆ ಮಾಡಿದರು ಎಲ್ಲಿಯೂ connect ಆಗಿಲ್ಲ ಮಳೆ ನೀರನ್ನು ಕೊಯ್ಲು ಮಾಡುತ್ತೇವೆ, ಮಳೆ ನೀರನ್ನು ಶೇಖರಣೆ ಮಾಡಿ ಇಡುತ್ತೇವೆ, ಬರಗಾಲದಲ್ಲಿ ಅಥವಾ ಬೇಸಿಗೆಯಲ್ಲಿ ಬಳಸುತ್ತೇವೆ ಎಂದಿದ್ದು 10% ಸಾದನೆ ಕೂಡ ಈ ರಾಜ್ಯದಲ್ಲಿ ಆಗಿಲ್ಲ ಮೂರನೆಯದು ಈ ಬರಗಾಲವನ್ನು face ಮಾಡಬೇಕಾಗಿದ್ದುದು making use of electricity, ಮಳೆ ಇಲ್ಲ ನೀರು ಹಾಯಿಸಲೇಬೇಕು Power utilize ಮಾಡಲೇಬೇಕು Complete stagnation Power cut ಅನ್ನು ಈ ದಶಕದಲ್ಲೇ ನೋಡದಷ್ಟನ್ನು ನೀವು ಸೃಷ್ಟಿಮಾಡಿಕೊಂಡಿದ್ದೀರಿ ಎಷ್ಟು ಬೇಜವಾಬ್ದಾರಿ ವರ್ತನೆ ಇಲ್ಲಿ ಆಗುತ್ತಿದೆ ಎಂದರೆ ಆ sub-committee ಅಧ್ಯಕ್ಷರು ಕೆಟ್ಟ ಹೆಸರು ಬರುತ್ತದೆಂದು ರಾಜೀನಾಮೆಯನ್ನು ಕೊಡುತ್ತಾರೆ ನಿಭಾಯಿಸುವುದಿಲ್ಲ Are you meant for this? ಅಂದವರು ಮಂತ್ರಿಗಿರಿಗೆ ರಾಜೀನಾಮೆಯನ್ನು ಕೊಟ್ಟು ಹೋಗಿ ಅಧ್ಯಕ್ಷಗಿರಿಗೆ ರಾಜೀನಾಮೆ ಕೊಡುವವರು ಮಂತ್ರಿಯಾಗಿ ಏಕೆ ಇರುತ್ತೀರೆಂದು ನಾನು ಕೇಳುವುದು When you are not here to take responsibility of that why are you here as

a Minister? ನಾನು ಅದನ್ನು ನಿಭಾಯಿಸುತ್ತೇನೆ ಎನ್ನುವುದನ್ನು ಬಿಟ್ಟು ನನಗೆ ಈ ಜವಾಬ್ದಾರಿ ಬೇಡ ಎಂದರೆ, ಇದು ಸರ್ಕಾರವನ್ನು ನಡೆಸುವ ರೀತಿಯೇ? ಗ್ರಾಮೀಣ ಪ್ರದೇಶದಲ್ಲಿ 9,10,12 ಗಂಟೆ power cut ಮಾಡಿದ್ದಿರಿ ಆದರೆ, ಇವತ್ತು 16 ಗಂಟೆಗೆ ಹೋಗಿದ್ದೀರಿ ಬೆಳಿಗ್ಗೆ 2 ರಿಂದ 3 ಗಂಟೆ quality powerನ್ನು ನೀವು ಕೊಡುತ್ತಿಲ್ಲ ನೀವು ಇದರ ಬಗ್ಗೆ ಕುಳಿತುಕೊಂಡು ಚರ್ಚೆಯನ್ನೇ ಮಾಡಲಿಲ್ಲ purchase ಮಾಡುತ್ತೀರೋ, generate ಮಾಡುತ್ತೀರೋ, ಏನು ಮಾಡುತ್ತೀರೋ, ಅದನ್ನು ನೀವು ಹೇಳಬೇಕಲ್ಲ? ನಮಗೆ ನಾಚಿಕೆಯಾಗಬೇಕಲ್ಲ? 5 ವರ್ಷದಿಂದ ತಮಿಳುನಾಡಿನವರು ನಮಗಿಂತ ಹಿಂದೆ ಇದ್ದವರು, they were in dearth of power, but today they are surplus in power ನಮಗೇನಾಯಿತು? ನಾವು ಯೋಚನೆಯನ್ನು ಮಾಡಲಿಲ್ಲ Power production, generation ನಿಮ್ಮ ಆದ್ಯತೆಯಲ್ಲೇ ಇಲ್ಲ ನಿಮಗೆ ಕಾಣುವುದು cycle ಮಾತ್ರ ಇನ್ನೇನು ಕಾಣಲಿಲ್ಲ ನಿಮ್ಮ ಕ್ಯಾಲೆಂಡರ್ ತೆಗೆದರೂ ಸೈಕಲ್, ಪುಸ್ತಕ ತೆಗೆದರೂ ಸೈಕಲ್, ಕಾರ್ಯಕ್ರಮ ತೆಗೆದರೆ ಸೈಕಲ್ N T Ramrao ಸೈಕಲ್ ಗುರ್ತಿನಲ್ಲಿ ಗೆದ್ದುಬಿಟ್ಟರಲ್ಲ, ಇವರಿಗೆಲ್ಲಾ ಸೈಕಲ್ ಬಂದು ಬಿಟ್ಟಿತು projects ಮಾಡಿ ದಮ್ಮಯ್ಯ ಎಂದು ಹೇಳುತ್ತೇವೆ ಹಣ ಇದೆ ಈ ವರ್ಷ ನಿಜವಾಗಿಯೂ ಸುವರ್ಣ ಕರ್ನಾಟಕವಾಗಿದ್ದರೆ, ಯಾರೋ tax payer ದುಡ್ಡಲ್ಲಿ ಎಲ್ಲಾದರೂ ಒಂದು ಕಡೆ ಬಳಕೆ ಮಾಡಿ

ಶ್ರೀ ಮಲ್ಲಿಕಾರ್ಜುನ ಖರ್ಗೆ ಆ ಸೈಕಲ್ ಕಳೆದುಹೋಗಿದೆ ಎಂದು ತಿಳಿದುಕೊಂಡೇ ನಿನ್ನೆ ಮುಖ್ಯಮಂತ್ರಿಯವರು ಬಂಗಾರಪ್ಪನವರ ಮನೆಗೆ ಹೋಗಿದ್ದರು!

ಶ್ರೀ ಜೆ ಸಿ ಮಾಧುಸ್ವಾಮಿ ಎರಡನೆಯದು, ಕುಡಿಯುವ ನೀರು ಕುಡಿಯುವ ನೀರಿನ ಪರಿಸ್ಥಿತಿ ಎಷ್ಟು ಬಿಗಡಾಯಿಸಿದೆ ಎಂದರೆ, ಮಾನ್ಯ ಪ್ರಕಾಶ್ ಸಾಹೇಬರೆ, ತಮಗೆ ಗೊತ್ತಿಲ್ಲ Task force ಇತ್ತು ಹೋದ ಸಲ ಬರಗಾಲದಲ್ಲಿ ಶಾಸಕರಿಗೆ ಕನಿಷ್ಠ ಕೆಲಸವನ್ನು ಇದರಿಂದ ಮಾಡುವುದಕ್ಕೆ ಸಾಧ್ಯವಾಯಿತು ತಕ್ಷಣ ನೀರಿನ ಸೌಲಭ್ಯ ಕಲ್ಪಿಸಿಕೊಡುತ್ತಿದ್ದೆವು ಈಗ ಬೋರ್‌ವೆಲ್‌ನವರೇನಾದರೂ ನಮ್ಮೆದುರಿಗೆ ಬಂದುಬಿಟ್ಟರೆ ನಾವು ತಪ್ಪಿಸಿಕೊಂಡು ಹೋಗುತ್ತೇವೆ! ಪಾಪ, ನಮ್ಮ ಅಪ್ಪ-ಅಮ್ಮ ನಮ್ಮನ್ನು ಸುಖವಾಗಿ ಸಾಕಿ ಬೆಳೆಸಿದ್ದರು ಯಾರಿಂದಲೂ ಸಾಲ ಪಡೆದುಕೊಂಡು ತಲೆತಗ್ಗಿಸಿಕೊಂಡು

ಓಡಾಡಿರಲಿಲ್ಲ ನಿಮ್ಮಿಂದಾಗಿ ಬೋರ್‌ವೆಲ್‌ನವನ ಎದುರು ತಲೆತಗ್ಗಿಸಿಕೊಂಡು ಓಡಾಡಬೇಕಾದ ಸ್ಥಿತಿ ಬಂದಿದೆ

ಶ್ರೀ ವಾಟಾಳ್ ನಾಗರಾಜ್ ಎಲ್ಲಾ ಶಾಸಕರನ್ನೂ ಸಾಲಗಾರರನ್ನಾಗಿ ಮಾಡಿದ ಕೀರ್ತಿ ನಿಮ್ಮ ಸರ್ಕಾರಕ್ಕೆ ಬಂದಿದೆ!

ಶ್ರೀ ಜೆ ಸಿ ಮಾಧುಸ್ವಾಮಿ ಅವನು ನಮಗೂ ಫೋನ್ ಮಾಡಿ ಟಾಸ್ಕ್ ಫೋರ್ಸ್‌ರವರ ಹತ್ತಿರ ಅನುಮತಿ ಕೊಡಿಸಿ ಸಾರ್ ಎಂದು ಕೇಳುತ್ತಾನೆ ಇಂಜಿನಿಯರ್ ಅವರನ್ನು ಕೇಳಿದರೆ, ZP ಮೇಲೆ ಹೇಳುತ್ತಾರೆ, ZP ಯನ್ನು ಕೇಳಿದರೆ ಟಾಸ್ಕ್‌ಫೋರ್ಸ್ ರವರನ್ನು ಏನು ಮಾಡೋಣವೆಂದು ಹೇಳುತ್ತಾರೆ ನಮಗೆಲ್ಲಾ ಎಂತಹ ಸ್ಥಿತಿ ಇತ್ತು? ನಿಮ್ಮ ಸರ್ಕಾರ ಒಪ್ಪಲಿ, ಬಿಡಲಿ ಅಕಸ್ಮಾತ್ ಯಾರಿಗಾದರೂ ಒಂದು ಬೋರ್‌ವೆಲ್ ಅನ್ನು ಹಾಕಿ ಎಂದಿದ್ದರೆ, ಗ್ಯಾರಂಟಿಯಾಗಿ ಬಂದು ಹಾಕುತ್ತಿದ್ದರು ಆದರೆ, ಇವತ್ತು ಒಂದು ಫೋನನ್ನೂ ಮುಟ್ಟುವುದಿಲ್ಲ! ಅವನು ಫೋನ್ ಮಾಡಿದರೆ, ಎಲ್ಲಿ ದುಡ್ಡನ್ನು ಕೇಳುತ್ತಾನೋ, ಎಲ್ಲಿಂದ ಕೊಡುವುದು, ಇದು ಯಾವ ಗ್ರಹಚಾರ ಎಂದು ನಾವು ಫೋನ್ ಮುಟ್ಟುವುದಿಲ್ಲ ಸನ್ಮಾನ್ಯ ಮಂತ್ರಿಯವರಿಗೆ ನಾವು ಹೇಳಿದೆವು, ಸಾರಾಸಗಟಾಗಿ ಎಲ್ಲಾ ತಾಲ್ಲೂಕಿಗೂ 7 ಲಕ್ಷ ಎಂದು ಹೇಳಿಬಿಟ್ಟರು ನೀವು 50 ಬೋರ್‌ವೆಲ್‌ಗಳನ್ನಾದರೂ ಕೊರೆದಿರಿ, 100 ಬೋರ್‌ವೆಲ್‌ಗಳನ್ನಾದರೂ ಕೊರೆದಿರಿ ಎಲ್ಲರಿಗೂ 7 ಲಕ್ಷ ಒಂದೊಂದು ತಾಲ್ಲೂಕಿನಲ್ಲಿ ಒಂದು, ಒಂದೂವರೆ ಕೋಟಿ ರೂಪಾಯಿಯಷ್ಟು ಬಿಲ್ ಇಟ್ಟುಕೊಂಡು, ಮಾನ್ಯ ಪ್ರಕಾಶ್‌ರವರೆ, ನೀವು ನಮಗೆ ಹಣದ ಕೊರತೆ ಇಲ್ಲವೆಂದು ಹರಿಕದೆ ದಾಸರಂತೆ ಭಜನೆ ಮಾಡಿಕೊಂಡು ಅಲ್ಲಿ payment ಮಾಡದಿದ್ದರೆ, ನಮ್ಮ ಮಾನ-ಮರ್ಯಾದೆ ಏನಾಗಬೇಕು ಹೇಳಿ? ಹಣದ ಕೊರತೆ ಏನೂ ಇಲ್ಲ, ಕೋಟಿ, ಕೋಟಿ ಇದೆ ಎಂದು ಹೇಳಿ ಆ ರೀತಿ ಮಾಡಿದರೆ ಶಾಸಕರಾದ ನಮ್ಮಗಳ ಮರ್ಯಾದೆ ಏನಾಗಬೇಕು ಹೇಳಿ?

ಶ್ರೀ ವಾಟಾಳ್ ನಾಗರಾಜ್ ಕೋಟಿ ಹೇಳುವುದರಲ್ಲಿ ಬಹಳ ವೇಗವಾಗಿದ್ದೀರಿ!

ಶ್ರೀ ಜೆ ಸಿ ಮಾಧುಸ್ವಾಮಿ ಇನ್ನು ಮುಂದೆ ಅದನ್ನು ಕೊರೆಸುವುದಾದರೂ ಹೇಗೆ ಹೇಳಿ? ನಮ್ಮ ಭಾಗಗಳಲ್ಲಿ 2-3 ದಿವಸಕ್ಕೆ ಟ್ಯಾಂಕರ್‌ನಲ್ಲಿ ನೀರನ್ನು ಪೂರೈಸುವ ಪರಿಸ್ಥಿತಿ ನಿರ್ಮಾಣವಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಟ್ಯಾಂಕರ್‌ನಲ್ಲಿ ನೀರು ಪೂರೈಸಿರುವವರಿಗೇ ಇನ್ನೂ ದುಡ್ಡನ್ನು ಕೊಟ್ಟಿಲ್ಲ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ ಹಿಂದಿನ point‌ಗೆ ಹಣವನ್ನು ಕೊಡದಿದ್ದರೆ, ಈ ಸಲ ಬೋರ್‌ವೆಲ್ ಹಾಕಿ ನೀರು ಕೊಡಿ ಎಂದರೆ, ಯಾರು ಕೋಡುತ್ತಾರೆ? ಕೆಲಸವೂ ಆಗುವುದಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ 2004ರ ಕೊನೆಯಲ್ಲಿ ನೀರನ್ನು transportation ಮಾಡಿದವರಿಗೆ ಕೊಡಬೇಕಿದ್ದ ಹಣವನ್ನೇ ಇದುವರೆಗೂ ಕೊಡದಿರುವುದರಿಂದ ಈಗ ಎಂಥ ಸ್ಥಿತಿ ನಿರ್ಮಾಣವಾಗಿದೆ ಎಂದರೆ, ನೀರು ಕಡಿಮೆಯಾಗಿದೆ, ನೀರಿಲ್ಲ ಯಾರಾದರೂ ಟ್ರ್ಯಾಕ್ಟರ್ ತೆಗೆದುಕೊಂಡು ಬನ್ನಿ ಎಂದರೆ ಯಾರೂ ಬರುವುದಿಲ್ಲ ಅವರುಗಳು ಒಂದು ಕಡೆ ನಮ್ಮ ಮಾನ–ಮರ್ಯಾದೆ ತೆಗೆಯುತ್ತಿದ್ದಾರೆ ಮಾನ್ಯ ಜಗದೀಶ್ ಶೆಟ್ಟರ್‌ರವರು ನಮ್ಮ ಜಿಲ್ಲೆಗೆ ಬಂದಾಗ 2004ನೇ ಇಸವಿಯ ವಿಚಾರವನ್ನು ಅವರ ಹತ್ತಿರ ಚರ್ಚೆ ಮಾಡಬೇಕಾಯಿತು ಬೋರ್‌ವೆಲ್ ಹಾಕಿರುವುದನ್ನು ಬಿಟ್ಟು ಬಿಡಿ ನೀವು ನೀರನ್ನು transport ಮಾಡಿ ಎಂದು ಹೇಳಿದ್ದಿರಿ ಆ ರೀತಿ transport ಮಾಡಿಸಿರತಕ್ಕದ್ದರ ಬಿಲ್ ಅನ್ನು 2004ರಿಂದ ಇನ್ನೂ ಕ್ಲಿಯರ್ ಮಾಡಿಲ್ಲ

ಶ್ರೀ ಬಿ ಆರ್ ಪಾಟೀಲ್ ಎಲ್ಲಿ ನೀರಿನ source ಸಿಗಲಿಲ್ಲ, ಅಲ್ಲಿ ಯಾರಾದರೂ ಖಾಸಗಿಯವರ ಬಾವಿಯಿಂದ ನೀರನ್ನು ತೆಗೆದುಕೊಂಡು ಸರಬರಾಜು ಮಾಡಿ ಎಂದು ಹೇಳಿದ್ದಿರಿ ಅವರಿಗೆ ತಿಂಗಳಿಗೆ 5 ಸಾವಿರದವರೆಗೆ ಕೊಡುತ್ತೇವೆಂದು ಸರ್ಕಾರ ಹೇಳಿತ್ತು ತಮಗೆ ಹೇಳುತ್ತೇನೆ ಪಾಪ! ಅವರುಗಳು ತಮ್ಮ ಬೆಳೆಗಳನ್ನು ಹಾಳು ಮಾಡಿಕೊಂಡು ಊರಿಗೆ ನೀರನ್ನು ಕೊಟ್ಟಿದ್ದಾರೆ ಮೂರು ವರ್ಷಗಳಾಯಿತು ಅವರಿಗೆ 5 ಸಾವಿರ ರೂಪಾಯಿಗಳನ್ನು ಇದುವರೆಗೆ ಕೊಡುವುದಕ್ಕಾಗಿಲ್ಲ ಇದು ಪರಿಸ್ಥಿತಿ ಸರ್ಕಾರದಲ್ಲಿ ದುಡ್ಡಿದ್ದರೆ ಏಕೆ ಈ ಪರಿಸ್ಥಿತಿ ಬರುತ್ತಿತ್ತು

ಶ್ರೀ ಸಿ ಎಸ್ ಪುಟ್ಟೇಗೌಡ ಮಾನ್ಯ ಅಧ್ಯಕ್ಷರೆ, ಇದು ವಿರೋಧ ಪಕ್ಷದವರಿಗೆ ಮಾತ್ರ ಕಾಡುತ್ತಿರುವ ಸಮಸ್ಯೆಯಾಗಿಲ್ಲ ನಮಗೂ, ಎಲ್ಲಾ ಶಾಸಕರಿಗೂ ನಿಜವಾಗಿಯೂ ಹಳ್ಳಿಗಳಲ್ಲಿ ತಿರುಗಾಡಲು ಬಹಳ ತೊಂದರೆ ಇದೆ ನೀರಾವರಿ ಇರುವ ಯಾರಾದರೂ ಪುಣ್ಯಾತ್ಮರನ್ನು ಬಿಟ್ಟರೆ, ನಮಗೆಲ್ಲರಗೂ ಈ ಸಮಸ್ಯೆ ಇದೆ ಇದರ ಜೊತೆಗೆ ನಾವು ಬೋರ್‌ವೆಲ್ ಅನ್ನು ಕೊರೆದರೆ ಎಲ್ಲೂ ನೀರು ಬರುವುದಿಲ್ಲ ಮೊದಲು 150 ಅಡಿಗೆ ಸಿಗುತ್ತಿದ್ದ ನೀರು

ಇವೊತ್ತು 300, 350 ಅಡಿಗಳಷ್ಟು ಕೊರೆದರೂ ಬರುವುದಿಲ್ಲ ನಮಗಂತೂ ಇದು ನಮಗೇ ಕೊನೆಯೇನೋ ನಮ್ಮ ಮಕ್ಕಳಿಗೆ ನೀರನ್ನು ಕೊಡಲು ಆಗುವುದೇ ಇಲ್ಲವೇನೋ ಎಂಬ ಪರಿಸ್ಥಿತಿ ಇದೆ ಎಲ್ಲಿ excess water flow ಆಗುತ್ತಿದೆ, waste water ಸಮುದ್ರಕ್ಕೆ ಸೇರುತ್ತಿದೆ, ಆ ನೀರನ್ನು ಕುಡಿಯುವುದಕ್ಕೋಸ್ಕರ ಇದು ಬಂದ ತಕ್ಷಣ tribunalನಲ್ಲಿದೆ, ಅದು ಇದೆ, ಇದು ಇದೆ ಎಂದು ಹೇಳುತ್ತಾರೆ ಆದರೆ, ಕುಡಿಯುವ ನೀರಿಗೆ ಯಾವ ಅಡ್ಡಿಯೂ ಇಲ್ಲವೆಂದು ನಾನು ಅಂದುಕೊಂಡಿದ್ದೇನೆ ನನ್ನ ಕ್ಷೇತ್ರದಲ್ಲೇ ಎಲ್ಲೋ ಒಂದು ಕಡೆ ಶನಿವಾರದ ಕೆರೆಯ waste water ಸಮುದ್ರಕ್ಕೆ ಬೀಳುತ್ತದೆ, ಇನ್ನೊಂದು ಕಡೆ ಎಲ್ಲೋ ಸಮುದ್ರಕ್ಕೆ ಬೀಳುತ್ತದೆ, ಅಂಥ water ಅನ್ನು ಕೆಲವು ಕೆರೆಗಳಿಗೆ ತುಂಬಿಸುವ ಕಾರ್ಯಕ್ರಮಕ್ಕೆ ನಿಜವಾಗಿಯೂ ಒತ್ತುಕೊಡಬೇಕು ಯಾವ್ಯಾವುದಕ್ಕೋ, ಕ್ಷೌರಿಕ ಪೆಟ್ಟಿಗೆಯನ್ನು ಹಿಡಿದುಕೊಂಡು ಹೋಗುವವರಿಗೆ ಎರಡು, ಮೂರು ಸಾವಿರ ಕೊಡುತ್ತೇವೆ ಸಪುಟ್ಟೇಗೌಡರೆ ಎಂದು ಎರಡು, ಮೂರು ಜನರಿಗೆ ಕೊಡುವುದು ಈ ರೀತಿಯ ಕಾರ್ಯಕ್ರಮ ನಿಂತರೂ ಪರವಾಗಿಲ್ಲ ಕುಡಿಯುವ ನೀರು ಬಹುಶ ನಮ್ಮ ಜೀವಿತಕ್ಕೇ ಕೊನೆಯಾಗುತ್ತದೆಂಬ ಭಯವಿದೆ ಮುಂದೆ ನಮ್ಮ ಮಕ್ಕಳಿಗೆ ಇನ್ನು ಹತ್ತಾರು ವರ್ಷದಲ್ಲಿ ಈಗ ಏನು 400 ಅಡಿ ಇದೆಯೋ, ಕೋಲಾರದಂತೆ 800, 1000 ಅಡಿಗಳಷ್ಟು ಆಳ ನಮ್ಮಲ್ಲಿ ಕೊರೆದರೂ ನೀರು ಬರುವಂತೆ ಕಾಣುವುದಿಲ್ಲ ಇದರ ಬಗ್ಗೆ ನಿಜವಾಗಿಯೂ ಸರ್ಕಾರದಲ್ಲಿ ಗಂಭೀರವಾಗಿ ಚಿಂತನೆ ಮಾಡಬೇಕು ಇದಕ್ಕೆ ಪಕ್ಷದ ಪ್ರಶ್ನೆ ತರುವುದು ಬೇಡ ಏಕೆಂದರೆ, ಎಲ್ಲರಿಗೂ, ಎಲ್ಲಾ ಪಕ್ಷದವರಿಗೂ ಕುಡಿಯಲು ನೀರು ಬೇಕು ಆದ್ದರಿಂದ, ಸರ್ಕಾರ ಇದಕ್ಕೆ ಒತ್ತು ಕೊಡಬೇಕೆಂಬುದು ನನ್ನ ಮನವಿ

ಛೇರ್ಮನ್ ಈಗ ಸಭೆಯು ಮುಕ್ತಾಯಗೊಂಡು ನಾಳೆ ಬೆಳಿಗ್ಗೆ 10 00 ಗಂಟೆಗೆ ಸೇರುವುದು

(ಸದನವು ಸಂಜೆ 6 ಗಂಟೆ 7 ನಿಮಿಷಕ್ಕೆ ಮುಕ್ತಾಯಗೊಂಡು ಪುನ ದಿನಾಂಕ 2ನೇ ಫೆಬ್ರವರಿ ಮಾಹೆ 2007ರ ಶುಕ್ರವಾರದಂದು ಬೆಳಿಗ್ಗೆ 10 00 ಗಂಟೆಗೆ ಸೇರಲು ನಿಶ್ಚಯಿಸಿತು)